2016 ಕ.ತೀ.ವ 497

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್

## ಶ್ರೀಮತಿ ಸಿ. ಮಾಂಗಾಯ್ –ವಿರುದ್ಧ– ಶ್ರೀ ಶಿವ ಸುಬ್ರಮಣ್ಯನ್ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – ಪ್ರಕರಣ 152 – ಅದರಡಿಯಲ್ಲಿ ನ್ಯಾಯಾಲಯಗಳು ಅಧಿಕಾರವನ್ನು ಚಲಾಯಿಸುವಾಗ, ನ್ಯಾಯಾಲಯವು ಈಗಾಗಲೇ ಹೊರಡಿಸಿದ ಆದೇಶವನ್ನು ತಾನೇ ಮಾರ್ಪಡಿಸಲಾಗದು ಅಥವಾ ಬದಲಾಯಿಸಲಾಗದು – ಸಿವಿಲ್ ಪ್ರಕ್ರಿಯಾ ಸಂಹಿತೆಯ 152ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ ನ್ಯಾಯಾಲಯವು ತೀರ್ಪಿನಲ್ಲಿ ಅಥವಾ ಆದೇಶದಲ್ಲಿ ನುಸುಳಿರಬಹುದಾದ ಗಣಿತದ ಮತ್ತು ಕೈ ತಪ್ಪಿನ ದೋಷಗಳನ್ನು ಮಾತ್ರವೇ ಸರಿಪಡಿಸಬಹುದಾಗಿದ್ದು, ಆ ಸಂಬಂಧ ಪ್ರಕರಣವೇ ಅದನ್ನು ವ್ಯಕ್ತವಾಗಿ ಸ್ಪಷ್ಟಪಡಿಸುತ್ತದೆ. ಆದರೆ, ಉಚ್ಚ ನ್ಯಾಯಾಲಯಕ್ಕೆ ಅದು ಈಗಾಗಲೇ ಹೊರಡಿಸಿದ ಆದೇಶವನ್ನು ಮಾರ್ಪಾಟು ಮಾಡುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಪುರಸ್ಕರಿಸುವ ಅಧಿಕಾರವಿದೆಯೇ ಎಂಬ ಪ್ರಾಸಂಗಿಕ ಪ್ರಶ್ನೆ ಉದ್ಭವಿಸುತ್ತದೆ. – ಸಿಪಿಸಿ 152ನೇ ಪ್ರಕರಣವು ತೀರ್ಪುಗಳಲ್ಲಿ, ಡಿಕ್ರಿಗಳಲ್ಲಿ ಅಥವಾ ಆದೇಶಗಳಲ್ಲಿ ಇರುವ ಲಿಪಿಕ ಅಥವಾ ಗಣಿತದ ತಪ್ಪುಗಳನ್ನು ಸರಿಪಡಿಸುವುದಕ್ಕಾಗಿ ಅಥವಾ ಯಾವುದೇ ರೀತಿಯಲ್ಲಿ ಪ್ರಾಸಂಗಿಕವಾಗಿ ತಪ್ಪಿಸಿಕೊಂಡ ಅಥವಾ ಬಿಟ್ಟುಹೋದ ಕಾರಣದಿಂದ ಅದರಲ್ಲಿ ಉಂಟಾಗುವ ದೋಷಗಳನ್ನು ಸರಿಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸುತ್ತದೆ. ಈ ಅಧಿಕಾರವನ್ನು ಚಲಾಯಿಸುವಿಕೆಯು ನ್ಯಾಯಾಲಯವು ಅದರ ಲಿಪಿಕ ಕಾರ್ಯದಲ್ಲಾದ ತಪ್ಪುಗಳನ್ನು ಸರಿಪಡಿಸುವುದನ್ನು ಉದ್ದೇಶಿಸುತ್ತದೆಯೇ ಹೊರತು ತೀರ್ಪು, ಡಿಕ್ರಿ ಅಥವಾ ಆದೇಶವನ್ನು ನೀಡಿದ ನಂತರ ಪರಿಣಾಮಕಾರಿಯಾದ ನ್ಯಾಯಿಕ ಆದೇಶವನ್ನು ಹೊರಡಿಸಲು ಉದ್ದೇಶಿಸುವುದಿಲ್ಲವೆಂದು ನಿರ್ಣಯಿಸಲಾಗಿದೆ. (ಪ್ಯಾರಾ 10, 12)

ಉಚ್ಚ ನ್ಯಾಯಾಲಯವು ವಿಷಯವನ್ನು ಅಂತಿಮವಾಗಿ ವಿಲೆ ಮಾಡಿರುವಾಗ, ನೇರವಾದ ಶಾಸನಾತ್ಮಕ ಉಪಬಂಧವಿಲ್ಲದಿದ್ದರೂ, ಹಿಂದಿನ ಅಂತಿಮ ವಿಲೆಯ ಆದೇಶವನ್ನು ರದ್ದುಪಡಿಸುವವರೆಗೆ ಅಥವಾ ಅದನ್ನು ರದ್ದುಪಡಿಸಿದ ಹೊರತು ಅಥವಾ ಆ ಮಟ್ಟಿಗೆ

*ಸಂಕೀರ್ಣ ಮೊದಲನೇ ಮೇಲ್ಮನವಿ ಸಂಖ್ಯೆ: 2206/2013, ದಿನಾಂಕ: 7ನೇ ಸೆಪ್ಟೆಂಬರ್, 2015.

ಅದನ್ನು ಮಾರ್ಪಾಟು ಮಾಡುವವರೆಗೆ ಅಥವಾ ಮಾರ್ಪಾಟು ಮಾಡಿದ ಹೊರತು ನ್ಯಾಯಾಲಯವು ಯಾವುದೇ ಹೊಸ ಪರಿಹಾರಕ್ಕಾಗಿ, ಹೆಚ್ಚುವರಿ ಪರಿಹಾರಕ್ಕಾಗಿ ಅಥವಾ ಅದೇ ಬಗೆಯ ಪರಿಹಾರಕ್ಕಾಗಿ ಸಲ್ಲಿಸುವ ಹೊಸ ಅರ್ಜಿಯನ್ನು ಪುರಸ್ಕರಿಸುವಂತಿಲ್ಲವೆಂದು ನಿರ್ಣಯಿಸಲಾಗಿದೆ. ಅದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಂತಿಮ ತೀರ್ಪನ್ನು ಹೊರಡಿಸಿದ ಮೇಲೆ ನ್ಯಾಯಾಲಯವು ಕಾರ್ಯಾಂತ ನಿವೃತ್ತವಾಗುತ್ತದೆ *(functus officio)*. ಹಾಗಾಗಿ, ಹೊಸ ನಿರ್ದೇಶನಗಳನ್ನು ನೀಡುವುದಕ್ಕಾಗಿ ಅಥವಾ ಹೆಚ್ಚಿನ ನಿರ್ದೇಶನಗಳನ್ನು ನೀಡುವುದಕ್ಕಾಗಿ ಅದು ಮಧ್ಯಕಾಲೀನ ಅರ್ಜಿಯನ್ನು ಪುರಸ್ಕರಿಸುವಂತಿಲ್ಲವೆಂದು ನಿರ್ಣಯಿಸಲಾಗಿದೆ – ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – 2(9) ಮತ್ತು 2(14)ನೇ ಪ್ರಕರಣಗಳನ್ನು ಚರ್ಚಿಸಲಾಗಿದೆ. (ಪ್ಯಾರಾ 15)

ಐ.ಎ.ಸಂ.1/2015ನ್ನು ವಿಲೆ ಮಾಡಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *(2008) 8 ಎಸ್‌ಸಿಸಿ 92*
   *ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು*
   *–ವಿರುದ್ಧ– ಎಸ್.ಎನ್. ಗೋಯಲ್* *(ಉಲ್ಲೇ) 9*
2. *(1977) 1 ಎಸ್‌ಸಿಸಿ 508*
   *ಮೆ॥ ಜೈಪುರ್ ಮಿನರಲ್ ಡೆವಲಪ್‌ಮೆಂಟ್ ಸಿಂಡಿಕೇಟ್,*
   *ಜೈಪುರ್ –ವಿರುದ್ಧ– ಆದಾಯ ತೆರಿಗೆ ಆಯುಕ್ತರು,*
   *ನವದೆಹಲಿ* *(ಉಲ್ಲೇ) 10*
3. *(1999) 3 ಎಸ್‌ಸಿಸಿ 500*
   *ದ್ವಾರಕ ದಾಸ್ –ವಿರುದ್ಧ–*
   *ಮಧ್ಯಪ್ರದೇಶ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು* *(ಉಲ್ಲೇ) 12*

ಮೇಲ್ಮನವಿದಾರರ ಪರವಾಗಿ : ಮೆ|| ಜಸ್ಟ್ ಲಾ ಅಸೋಸಿಯೇಟ್ಸ್ ಪರವಾಗಿ ಶ್ರೀ ಎಸ್.ಎಸ್. ನಾಗಾನಂದ್, ಹಿರಿಯ ನ್ಯಾಯವಾದಿ,
1 ಮತ್ತು 2ನೇ ಎದುರುದಾರರ ಪರವಾಗಿ ಶ್ರೀ ಷಣ್ಮುಖಪ್ಪ, ಮೆ|| ಕೇಸ್ವಿ ಅಂಡ್ ಕಂ.,
6ನೇ ಎದುರುದಾರರ ಪರವಾಗಿ: ಶ್ರೀ ಆನಂತ್ ಮಂಡಗಿ, ಹಿರಿಯ ನ್ಯಾಯವಾದಿ.

## ಐ.ಎ. 1/2015ರ ಮೇಲಿನ ಆದೇಶ

**ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್:**

ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಎಂದರೆ, ಮೇಲ್ಮನವಿದಾರ/ಅರ್ಜಿದಾರ/ವಾದಿಯ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಸ್.ಎಸ್. ನಾಗಾನಂದ್ ಮತ್ತು 6ನೇ ಎದುರುದಾರರ/ 6ನೇ ಪ್ರತಿವಾದಿಯ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಅನಂತ್ ಮಂಡಗಿ ಅವರ ವಾದಗಳನ್ನು ಆಲಿಸಿದ್ದೇನೆ.

2. ಈ ಅರ್ಜಿಯ ಮೂಲಕ ವಾದಿ – ಮೇಲ್ಮನವಿದಾರರು, ಮೆ|| ಸುದಾರಾಮ್ ಟ್ರಸ್ಟ್‌ಗೆ ಸೇರಿದ ಬೆಂಗಳೂರಿನ ಮಿಲ್ಲರ್ಸ್ ರಸ್ತೆಯಲ್ಲಿರುವ ಸಂ.71ರ ಸೋನಾ ಟವರ್ಸ್‌ನಿಂದ ಪ್ರಾಪ್ತಿಯಾದ ಎಲ್ಲಾ ಸ್ವೀಕೃತಿಗಳು/ಬಾಡಿಗೆಗಳನ್ನು ಈ ನ್ಯಾಯಾಲಯದ ರಿಜಿಸ್ಟ್ರಾರ್ ಕಚೇರಿಯಲ್ಲಿ ಠೇವಣಿ ಇಡುವಂತೆ 6ನೇ ಪ್ರತಿವಾದಿ / 6ನೇ ಎದುರುದಾರರಿಗೆ ನಿರ್ದೇಶನ ನೀಡಬೇಕೆಂದು ಕೋರಿಕೆ ಸಲ್ಲಿಸಿದ್ದಾರೆ.

3. ವಾದಿಯ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಸ್.ಎಸ್. ನಾಗಾನಂದ್ ಅವರ ವಾದವು ಈ ಮುಂದಿನಂತಿದೆ: ಈ ನ್ಯಾಯಾಲಯವು 28.11.2014ರ ಆದೇಶದ ಮೂಲಕ, 01.02.2012ರಿಂದ ಪ್ರಾರಂಭವಾಗಿ ಆದೇಶದ ದಿನಾಂಕದವರೆಗೆ ವಾದಿಯ ಪಾಲಿನ ಬಾಡಿಗೆ ಆದಾಯದ ಶೇ.10 ಅನ್ನು ಆದೇಶದ ದಿನಾಂಕದಿಂದ ಎಂಟು ವಾರಗಳೊಳಗೆ ಅಧಿವಿಚಾರಣಾ ನ್ಯಾಯಾಲಯಕ್ಕೆ ಠೇವಣಿ ಮಾಡುವಂತೆ ಮತ್ತು ಪ್ರಮಾಣಾನುಸಾರ ವೆಚ್ಚಗಳನ್ನು

ಭರಿಸಿದ ನಂತರ ಪ್ರತಿ ತಿಂಗಳು ಒಟ್ಟು ಬಾಡಿಗೆಯ ಶೇ.10ರಷ್ಟನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಠೇವಣಿ ಮಾಡುವುದನ್ನು ಮುಂದುವರಿಸುವಂತೆ 6ನೇ ಪ್ರತಿವಾದಿಗೆ ನಿರ್ದೇಶನ ನೀಡಿ ಮೇಲ್ಮನವಿಯನ್ನು ವಿಲೆ ಮಾಡಿತ್ತು, ಆದರೆ 6ನೇ ಪ್ರತಿವಾದಿಯು ಈ ನಿರ್ದೇಶನವನ್ನು ಪಾಲಿಸುತ್ತಿಲ್ಲವೆಂದು ಅವರು ವಾದಿಸಿದ್ದಾರೆ. ಅಲ್ಲದೆ ಸದರಿ ಮೊತ್ತವನ್ನು ಎರಡು ವರ್ಷಗಳ ಅವಧಿಗೆ ಯಾವುದೇ ರಾಷ್ಟ್ರೀಯ ಬ್ಯಾಂಕಿನಲ್ಲಿ 6ನೇ ಎದುರುದಾರನು ಠೇವಣಿ ಮಾಡಬಹುದಾದ ನಿಶ್ಚಿತ ಠೇವಣಿಯಲ್ಲಿ ಠೇವಣಿ ಮಾಡುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೂ ಕೂಡ ನಿರ್ದೇಶಿಸಲಾಗಿತ್ತು ಮತ್ತು ಸದರಿ ನಿಶ್ಚಿತ ಠೇವಣಿಯ ಉತ್ಪತ್ತಿಗಳನ್ನು ಮತ್ತು ಪ್ರಾಪ್ತವಾದ ಬಡ್ಡಿಯನ್ನು ಯಶಸ್ವಿ ಪಕ್ಷಕಾರನು ಸ್ವೀಕರಿಸುವ ಸ್ವಾತಂತ್ರ್ಯವನ್ನು ಕಾದಿರಿಸಿತ್ತು ಮತ್ತು ಇಲ್ಲಿಂದ ಇನ್ನು ಮುಂದೆ ಎಂದರೆ ಆದೇಶದ ದಿನಾಂಕದ ನಂತರ 6ನೇ ಪ್ರತಿವಾದಿಯು ಠೇವಣಿ ಮಾಡಬಹುದಾದ ಮೊತ್ತವನ್ನು ಹಿಂಪಡೆಯುವುದಕ್ಕಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅಗತ್ಯ ಅರ್ಜಿಯನ್ನು ಸಲ್ಲಿಸಲು ವಾದಿಗೆ ಸ್ವಾತಂತ್ರ್ಯವನ್ನು ಕಾದಿರಿಸಲಾಗಿತ್ತು ಮತ್ತು ಹಿಂಪಡೆಯುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಲಾಗಿದ್ದರೆ ಅದನ್ನು ಗುಣಾವಗುಣಗಳ ಮೇಲೆ ಮತ್ತು ಕಾನೂನಿಗನುಗುಣವಾಗಿ ನ್ಯಾಯ ನಿರ್ಣಯ ಮಾಡುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೂ ಕೂಡ ನಿರ್ದೇಶಿಸಲಾಗಿತ್ತು ಮತ್ತು ಸದರಿ ಆದೇಶದ ಅನುಸಾರ 6ನೇ ಪ್ರತಿವಾದಿಯು ರೂ.1,11,578/–, ರೂ.78,868/– ಮತ್ತು ರೂ.14,111/– ಮೊತ್ತದ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಲಗತ್ತಿಸಿದ ಮೆಮೋಗಳನ್ನು ಸಲ್ಲಿಸಿದ್ದು, ಅದರಡಿಯಲ್ಲಿ ಅನುಕ್ರಮವಾಗಿ ಸದರಿ ಮೊತ್ತವು 2014ರ ಡಿಸೆಂಬರ್ ತಿಂಗಳ ಮತ್ತು 01.02.2012ರಿಂದ 28.11.2014ರ ಅವಧಿಯ ಬಾಡಿಗೆ ಆದಾಯದ ವಾದಿ/ಮೇಲ್ಮನವಿದಾರನ ಶೇ.10ರ ಪಾಲಿನ ಕಡೆಗೆ ಠೇವಣಿ ಮಾಡಲಾಗುತ್ತಿರುವ ಮೊತ್ತವೆಂದು ತಿಳಿಸಲಾಗಿತ್ತು. ಆದರೆ ಸದರಿ ಮೆಮೋಗಳು 6ನೇ ಪ್ರತಿವಾದಿಯು ಅಧೀನ ನ್ಯಾಯಾಲಯಕ್ಕೆ ಠೇವಣಿ ಮಾಡಿದ ಮೊತ್ತಗಳು ಯಾವ ಆಧಾರದಲ್ಲಿ ಎಷ್ಟು ಮೊತ್ತ ಪ್ರಾಪ್ತವಾಯಿತು ಎಂಬ ಬಗ್ಗೆ ತಿಳಿಸಿರಲಿಲ್ಲ, ಹಾಗಾಗಿ ಈ ನ್ಯಾಯಾಲಯವು ಹೊರಡಿಸಿದ ಆದೇಶ ಪಾಲನೆಯಾಗಿಲ್ಲ, ಇದರಿಂದ ಗತ್ಯಂತರವಿಲ್ಲದೆ ವಾದಿಯು ಪ್ರಸ್ತುತ ಅರ್ಜಿಯನ್ನು ಸಲ್ಲಿಸಬೇಕಾಯಿತು ಎಂದು ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ. ಅಲ್ಲದೆ, ಕಟ್ಟಡದ ವಿವಿಧ ವಿಭಾಗಗಳ ಅಧಿಭೋಗದಲ್ಲಿರುವ ಬಾಡಿಗೆದಾರರು ಸಂದಾಯ

ಮಾಡಿದ ಬಾಡಿಗೆ ವಿವರಗಳ ಸಹಿತ ಸಂಬಂಧಪಟ್ಟ ಬಾಡಿಗೆದಾರರ ವಿವರಗಳನ್ನು ಒದಗಿಸುವಂತೆ 6ನೇ ಪ್ರತಿವಾದಿಗೆ ನಿರ್ದೇಶಿಸಲಾಗಿದ್ದರೂ ಮತ್ತು 6ನೇ ಪ್ರತಿವಾದಿಗೆ ಈ ನ್ಯಾಯಾಲಯವು ನೀಡಿರುವ ನಿರ್ದೇಶನಗಳ ಬಗ್ಗೆ ಸಂಪೂರ್ಣ ಅರಿವಿದ್ದರೂ ಕೂಡ ಆತನು ಅದನ್ನು ಪಾಲನೆ ಮಾಡಿಲ್ಲ. ಆ ಮೂಲಕ 6ನೇ ಪ್ರತಿವಾದಿಯು ಉದ್ದೇಶಪೂರ್ವಕವಾಗಿ ಈ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ್ದಾನೆಂದೂ ಸಹ ವಾದಿಸಿದ್ದಾರೆ. ಅಂತೆಯೇ ವಾದಿಯು 28.02.2015ರಂದು ಯಾವ ಆಧಾರದ ಮೇಲೆ ಲೆಕ್ಕಹಾಕಿ ಬಾಡಿಗೆ ಬಾಕಿಗಳನ್ನು ಠೇವಣಿ ಮಾಡಲಾಯಿತು ಎಂಬ ಬಗ್ಗೆ ವಿವರಗಳನ್ನು ಒದಗಿಸುವಂತೆ ಕೋರಿ 6ನೇ ಪ್ರತಿವಾದಿಗೆ ಲೀಗಲ್ ನೋಟೀಸ್ ಕೊಡಿಸಿದ್ದರು. ಅದಕ್ಕೆ ಉತ್ತರವಾಗಿ, 6ನೇ ಪ್ರತಿವಾದಿಯು ಬಾಡಿಗೆ ಸ್ವತ್ತುಗಳ ವಿವರಗಳನ್ನು ಮತ್ತು ಲೆಕ್ಕಗಳನ್ನು ಲೆಕ್ಕ ಪರಿಶೋಧನೆ ಮಾಡದಿರುವ, ಚಾರ್ಟರ್ಡ್ ಅಕೌಂಟೆಂಟ್ ಪ್ರಮಾಣೀಕರಿಸಿದ್ದಾನೆಂದು ಹೇಳಲಾಗಿರುವ ಲೆಕ್ಕ ವಿವರಗಳನ್ನು ಸಹ ಲಗತ್ತಿಸಿ ದಿನಾಂಕ 04.03.2015ರಂದು ನೋಟೀಸ್‌ಗೆ ಉತ್ತರವನ್ನು ನೀಡಿದ್ದಾರೆ. ಸದರಿ ಲೆಕ್ಕ ಪತ್ರಗಳು ಮೇಲ್ಮನವಿದಾರಳಿಗೆ ಬರಬೇಕಾದ ಒಟ್ಟು ಬಾಡಿಗೆಗಳ ಶೇ.10ರಷ್ಟು ಪ್ರಯೋಜನವು ಆಕೆಗೆ ದೊರೆಯದಂತೆ ಮಾಡುವ ಉದ್ದೇಶದಿಂದ ಸೃಷ್ಟಿಸಲಾದ ಮತ್ತು ಕೃತ್ರಿಮವಾಗಿ ತಯಾರಿಸಲಾದ ಲೆಕ್ಕ ಪತ್ರಗಳಾಗಿವೆಯೆಂದೂ ಸಹ ವಾದಿಸಲಾಗಿದೆ. ಹಾಗೆಯೇ ಲೆಕ್ಕ ಪತ್ರಗಳಲ್ಲಿ ತೋರಿಸಿದ ವೆಚ್ಚಗಳನ್ನು ಯಾವುದೇ ದಸ್ತಾವೇಜೀಯ ರುಜುವಾತಿನಿಂದ ಸಮರ್ಥಿಸಿಲ್ಲ ಮತ್ತು ಅದರಲ್ಲಿ ತೋರಿಸಲಾದ ವೆಚ್ಚಗಳು ಹಿಗ್ಗಿಸಲಾದ ಮತ್ತು ಸೃಷ್ಟಿಸಲಾದ ವೆಚ್ಚಗಳಾಗಿವೆಯೆಂದು ಮಾನ್ಯ ಹಿರಿಯ ನ್ಯಾಯವಾದಿಗಳು ವಾದಿಸಿದ್ದಾರೆ. 6ನೇ ಪ್ರತಿವಾದಿಯು ಅಧಿವಿಚಾರಣಾ ನ್ಯಾಯಾಲಯಕ್ಕೆ ದಿನಾಂಕ 04.03.2015 ಉತ್ತರ ಪತ್ರದ ಜೊತೆಗೆ ಸಲ್ಲಿಸಿದ ಲೆಕ್ಕ ಪತ್ರದ ವಿವರ ಮತ್ತು ಲಗತ್ತುಗಳೂ ಸಹ ಮೋಸದ ದಾಖಲೆಯಾಗಿದ್ದು, ಅದು ಈ ನ್ಯಾಯಾಲಯವು ಹೊರಡಿಸಿದ ನಿರ್ದೇಶನಗಳಿಂದ ಉಪಾಯವಾಗಿ ತಪ್ಪಿಸಿಕೊಳ್ಳುವ ಪ್ರಯತ್ನವಾಗಿದೆಯೆಂದು ಸಹ ಅವರು ವಾದಿಸಿದ್ದಾರೆ.

4. ಅದಕ್ಕೆ ವ್ಯತಿರಿಕ್ತವಾಗಿ 6ನೇ ಪ್ರತಿವಾದಿಯ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಅನಂತ ಮಂಡಗಿ ಅವರು, ಈ ನ್ಯಾಯಾಲಯವು

28.11.2014ರಂದು ಆದೇಶವನ್ನು ಹೊರಡಿಸಿದ ನಂತರ ಮತ್ತು ಮೇಲ್ಮನವಿಯನ್ನು ವಿಲೆ ಮಾಡಿದ ನಂತರ ಅದು ಕಾರ್ಯಾಂತ ನಿವೃತ್ತವಾಗಿದೆ (functus officio). ಹಾಗಾಗಿ, ಅದು ಹೊರಡಿಸಿದ ಆದೇಶವನ್ನು, 152ನೇ ಪ್ರಕರಣದ ಅಡಿಯಲ್ಲಿ ಅಥವಾ ಪುನರ್ ಪರಿಶೀಲನಾ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಹೊರತುಪಡಿಸಿ, ಸರಿಪಡಿಸುವ ಅಥವಾ ಮಾರ್ಪಡಿಸುವ ಯಾವುದೇ ಅಧಿಕಾರವನ್ನು ಅದು ಚಲಾಯಿಸಲಾಗದು ಎಂದು ವಾದಿಸಿದ್ದಾರೆ. ಹಾಗಾಗಿ ಪ್ರಸ್ತುತ ಅರ್ಜಿಯು ಸಮರ್ಥಿತವಾಗಲಾರದು ಮತ್ತು ಅದು ಪ್ರಾರಂಭದಲ್ಲಿಯೇ ವಜಾಗೊಳ್ಳುವುದಕ್ಕೆ ಗುರಿಯಾಗುತ್ತದೆಂದು ವಾದಿಸುತ್ತಾರೆ. ವಿವಾದಿತ ಸ್ವತ್ತನ್ನು ಪಾಲುದಾರಿಕೆ ಪತ್ರ / ಕೌಟುಂಬಿಕ ಇತ್ಯರ್ಥದ ಅಡಿಯಲ್ಲಿ ಟ್ರಸ್ಟ್‌ಗೆ ವರ್ಗಾಯಿಸಲಾಗಿದ್ದು, ಅದರಡಿಯಲ್ಲಿ ಪಕ್ಷಕಾರರ ಮೇಲೆ ಕೆಲವು ಬಾಧ್ಯತೆಗಳನ್ನು ಹೊರಿಸಲಾಗಿದ್ದು, ಅದಕ್ಕೆ ಅಂಟಿ ಕೂರದೆ ಟ್ರಸ್ಟಿನ ಪೂರಕ ಪತ್ರವನ್ನೂ ಒಳಗೊಂಡಂತೆ ಸದರಿ ಕುಟುಂಬ ಪಾಲುದಾರಿಕೆ / ಕುಟುಂಬ ಇತ್ಯರ್ಥದಲ್ಲಿ ಏನನ್ನು ತೋರಿಸಲಾಗಿದೆಯೋ ಅದನ್ನೇ ಟ್ರಸ್ಟ್‌ನ ನಿರ್ವಾಹಕರು ಪಾಲಿಸಿದ್ದಾರೆ. ಆದ್ದರಿಂದ ವಾದಿಯು ಮಂಡಿಸಿದ ವಾದಗಳಲ್ಲಿ ಯಾವುದೇ ಹುರುಳಿಲ್ಲವೆಂದು ಅವರು ವಾದಿಸಿದ್ದಾರೆ. ಅವರ ವಾದಕ್ಕೆ ಬೆಂಬಲವಾಗಿ ಈ ಕೆಳಕಂಡ ತೀರ್ಪುಗಳನ್ನು ಅವರು ಆಧಾರವಾಗಿಟ್ಟುಕೊಂಡಿದ್ದಾರೆ:

(i) (1999)3 ಎಸ್‌ಸಿಸಿ 500 – ದ್ವಾರಕ ದಾಸ್ –ವಿರುದ್ಧ– ಮಧ್ಯಪ್ರದೇಶ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು.

(ii) (2014) 10 ಎಸ್‌ಸಿಸಿ 754 – ಅಬ್ದುಲ್ ಬಸಿತ್ ಅಲಿಯಾಸ್ ರಾಜು ಮತ್ತು ಇತರರು –ವಿರುದ್ಧ– ಮೊಹಮ್ಮದ್ ಅಬ್ದುಲ್ ಕದೀರ್ ಚೌಧರಿ ಮತ್ತು ಇನ್ನೊಬ್ಬರು.

(iii) (2011) 11 ಎಸ್‌ಸಿಸಿ 198 – ಸರೂಪ್ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ– ಯೂನಿಯನ್ ಆಫ್ ಇಂಡಿಯಾ ಮತ್ತು ಇನ್ನೊಬ್ಬರು.

(iv) (2008) 8 ಎಸ್‌ಸಿಸಿ 92 – ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು –ವಿರುದ್ಧ– ಎಸ್.ಎನ್. ಗೋಯಲ್.

5. ಅದಕ್ಕೆ ಉತ್ತರವಾಗಿ, ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಸ್.ಎಸ್. ನಾಗಾನಂದ್ ಅವರು ಪ್ರಶ್ನಿತ ಅರ್ಜಿಯು ಸಮರ್ಥನೀಯವಾದುದಾಗಿದೆ ಮತ್ತು 28.11.2014ರಂದು ಆದೇಶವನ್ನು ಹೊರಡಿಸಿದ ಮೇಲೆ ಈ ನ್ಯಾಯಾಲಯವು ಕಾರ್ಯಾಂತ ನಿವೃತ್ತಿಯಾಗುವುದಿಲ್ಲವೆಂದು ವಾದಿಸಿ, ಅವರ ವಾದಕ್ಕೆ ಬೆಂಬಲವಾಗಿ ಈ ಕೆಳಕಂಡ ತೀರ್ಪುಗಳನ್ನು ಅವರು ಆಧಾರವಾಗಿಟ್ಟುಕೊಂಡಿದ್ದಾರೆ:

(i) (1977)1 ಎಸ್‌ಸಿಸಿ 508 – ಮೆ॥ ಜೈಪುರ್ ಮಿನರಲ್ ಡೆವಲಪ್‌ಮೆಂಟ್ ಸಿಂಡಿಕೇಟ್, ಜೈಪುರ್ –ವಿರುದ್ಧ– ಆದಾಯ ತೆರಿಗೆ ಆಯುಕ್ತರು, ನವದೆಹಲಿ.

(ii) 1985 (1) ಎಪಿಎಲ್‌ಜೆ 307 – ಕಂಭಂಪತಿ ಸೋವಮ್ಮ –ವಿರುದ್ಧ– ಜಿ. ರಾಧಾಕೃಷ್ಣ ಮೂರ್ತಿ.

(iii) ಎಐಆರ್ 1987 ಎಪಿ 206 – ಶ್ರೀಮತಿ ತಹೆರಾ ಸಯೀದ್ –ವಿರುದ್ಧ– ಎಂ. ಷಣ್ಮುಗಂ ಮತ್ತು ಇತರರು.

(iv) 1988 ಎಸ್‌ಸಿಸಿ ಆನ್‌ಲೈನ್ ಕರ್ನಾ. 101 – ಮೆ॥ ಪಿಯರ್ಸ್ ಲೆಸ್ಲೀ ಇಂಡಿಯಾ ಲಿಮಿಟೆಡ್ –ವಿರುದ್ಧ– ಆದಾಯ ತೆರಿಗೆ ಆಯುಕ್ತರು, ಬೆಂಗಳೂರು, ಕರ್ನಾಟಕ.

(v) 2002 (1) ಎಎಲ್‌ಟಿ 29 – ನಲ್ಲ ರಾಜರೆಡ್ಡಿ –ವಿರುದ್ಧ– ಬಿ. ಶ್ಯಾಮಸುಂದರ್ ಜೋಶಿ ಮತ್ತು ಇತರರು.

(vi) (2002)3 ಎಸ್‌ಸಿಸಿ 533 – ಪದ್ಮಾ ಸುಂದರ ರಾವ್ (ಮೃತ) –ವಿರುದ್ಧ– ತಮಿಳುನಾಡು ರಾಜ್ಯ ಸರ್ಕಾರ.

(vii) (2003)5 ಎಸ್‌ಸಿಸಿ 568 – ಯೂನಿಯನ್ ಆಫ್ ಇಂಡಿಯಾ –ವಿರುದ್ಧ– ಚಜ್ಜುರಾಮ್ (ಮೃತ) ಕಾನೂನು ವಾರಸುದಾರರ ಮೂಲಕ.

ಅದರಂತೆ, ಅವರು ಐ.ಎ.1/2015 ವಾದಕಾಲೀನ ಅರ್ಜಿಯಲ್ಲಿ ಕೋರಿರುವಂತೆ ಅರ್ಜಿಗಳನ್ನು ಪುರಸ್ಕರಿಸಿ, ಸೂಕ್ತ ನಿರ್ದೇಶನಗಳನ್ನು ನೀಡುವಂತೆ ಪ್ರಾರ್ಥಿಸಿದ್ದಾರೆ.

6. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ನಂತರ ಈ ಕೆಳಕಂಡ ಅಂಶಗಳು ಪರಿಗಣನೆಗೆ ಉದ್ಭವಿಸುತ್ತವೆಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ:

> "1. ಐ.ಎ.1/2015 ವಾದಕಾಲೀನ ಅರ್ಜಿಯುನ್ನು ಈ ನ್ಯಾಯಾಲಯವು ಗುಣವಗುಣಗಳ ಮೇಲೆ ಪುರಸ್ಕರಿಸಬಹುದೇ ಅಥವಾ 28.11.2014ರಂದು ಹೊರಡಿಸಿದ ಆದೇಶದ ನಂತರ ಈ ನ್ಯಾಯಾಲಯವು ಕಾರ್ಯಾಂತ ನಿವೃತ್ತವಾಗಿದೆ ಎಂಬ ಆಧಾರದ ಮೇಲೆ ಸಮರ್ಥನೀಯವಾಗುವುದಿಲ್ಲವೆಂದು ಅದು ವಜಾಗೊಳ್ಳುವುದಕ್ಕೆ ತಕ್ಕದ್ದಾಗಿದೆಯೇ?
>
> 2. ಆದೇಶವೇನು?"

7. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ಮೇಲೆ, ಓ.ಎಸ್.ಸಂ. 1492/2012ರ ದಾವೆಯಲ್ಲಿ ವಿಫಲವಾದ ವಾದಿಯು ಆ ದಾವೆಯಲ್ಲಿ ದಿನಾಂಕ 05.01.2013ರಂದು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶದ ಸರಿತನ ಮತ್ತು ಕಾನೂನು

ಸಮ್ಮತತೆಯನ್ನು ಪ್ರಶ್ನಿಸಲಾಗಿದ್ದ ಎಂ.ಎಫ್.ಎ 2206/2013ರ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು 28.11.2014ರಂದು ಹೊರಡಿಸಿದ ಆದೇಶದಿಂದ ಪ್ರಶ್ನಿತ ಅರ್ಜಿಯು ಉದ್ಭವವಾಗಿದೆಯೆಂಬುದು ತಿಳಿದುಬರುತ್ತಿದ್ದು, ಆ ನಂತರ ಈ ನ್ಯಾಯಾಲಯವು, ನಂ.71, ಮಿಲ್ಲರ್ಸ್ ರಸ್ತೆ, ಬೆಂಗಳೂರು ವಿಳಾಸದ ಮೆ॥ ಸುಂದರಂ ಟ್ರಸ್ಟ್‌ಗೆ ಸೇರಿದ ಸೋನಾ ಟವರ್ಸ್‌ನಿಂದ ಪ್ರಾಪ್ತವಾದ ಎಲ್ಲಾ ಸ್ವೀಕೃತಿಗಳು/ ಬಾಡಿಗೆಗಳನ್ನು ಬೆಂಗಳೂರಿನ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಮಿಲ್ಲರ್ಸ್ ರಸ್ತೆ ಶಾಖೆಯ ಚಾಲ್ತಿ ಖಾತೆ ಸಂ.3024638547 ರಲ್ಲಿ ಠೇವಣಿ ಇಡಲು 6ನೇ ಪ್ರತಿವಾದಿಗೆ ನಿರ್ದೇಶಿಸುವಂತೆ ಮತ್ತು ನ್ಯಾಯಾಲಯದ ಅನುಮತಿ ಪಡೆದ ಹೊರತು ಸದರಿ ಖಾತೆಯಿಂದ ಯಾವುವೇ ಮೊತ್ತಗಳನ್ನು ಹಿಂಪಡೆಯುವುದರಿಂದ 1, 2, 3 ಮತ್ತು 6ನೇ ಪ್ರತಿವಾದಿಗಳನ್ನು ಮತ್ತು ಇತರ ಯಾರೇ ಅಧಿಕೃತ ಸಹಿದಾರರನ್ನು ನಿರ್ಬಂಧಿಸಲು ಹೆಚ್ಚಿನ ನಿರ್ದೇಶನ ನೀಡುವಂತೆ ಕೋರಿ ಮೇಲ್ಮನವಿದಾರ / ವಾದಿ / ಅರ್ಜಿದಾರನು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿತ್ತು. ಸದರಿ ಮೇಲ್ಮನವಿಯನ್ನು ವಿಚಾರಣೆ ಮಾಡುವ ಅವಧಿಯಲ್ಲಿ ವಾದಿಯು ಟ್ರಸ್ಟ್‌ನಲ್ಲಿ ಶೇ.10ರ ಹಿತಾಸಕ್ತಿಯನ್ನು ಹೊಂದಿದ್ದಾಳೆ, ಹಾಗಾಗಿ, ಆಕೆಯು ಕಟ್ಟಡದ ನಿರ್ವಹಣೆಗಾಗಿ ಖರ್ಚಾಗಬಹುದಾದ ದೈನಂದಿನ ವೆಚ್ಚಗಳಿಗೆ ಮತ್ತು ಅದಕ್ಕೆ ತಗಲುವ ಪ್ರಾಸಂಗಿಕ ವೆಚ್ಚಗಳಿಗೆ ಒಳಪಟ್ಟು ಉಳಿಯುವ ಬಾಡಿಗೆ ಆದಾಯದ ಉತ್ಪತ್ತಿಗಳಿಗೆ ಅಷ್ಟೇ ಪ್ರಮಾಣದಲ್ಲಿ ಹಕ್ಕುಳ್ಳವಳಾಗಿದ್ದಾಳೆ ಎಂಬ ವಾಸ್ತವ ಸಂಗತಿಯು ನಿರ್ವಿವಾದವಾಗಿದೆಯೆಂಬುದು ನ್ಯಾಯಾಲಯದ ಗಮನಕ್ಕೆ ಬಂದಿತ್ತು. ಹಾಗಾಗಿ ಈ ನ್ಯಾಯಾಲಯವು ಎರಡೂ ಕಡೆಯ ವಾದಗಳನ್ನು ಪರಿಗಣಿಸಿದ ನಂತರ 28.11.2014ರಂದು ಈ ಕೆಳಕಂಡಂತೆ ಮೇಲ್ಮನವಿಯನ್ನು ವಿಲೆ ಮಾಡುವ ಆದೇಶವನ್ನು ಹೊರಡಿಸಿತ್ತು:

> "6. ಅದೇನೇ ಇರಲಿ, ವಾದಿಯು ಉತ್ಪತ್ತಿಗಳಲ್ಲಿ ಎಂದರೆ, ಟ್ರಸ್ಟ್ ಅಗತ್ಯವಾಗಿ ಭರಿಸಬಹುದಾದಂಥ ವೆಚ್ಚಗಳು ಅಥವಾ ಖರ್ಚನ್ನು ಕಳೆದ ನಂತರ ಟ್ರಸ್ಟ್ ಸ್ವೀಕರಿಸಬಹುದಾದ ಬಾಡಿಗೆಯಲ್ಲಿ ಶೇ.10ರಷ್ಟು ಹಿತಾಸಕ್ತಿಗೆ ಹಕ್ಕುಳ್ಳವಳಾಗಿದ್ದಾಳೆ ಎಂಬ ವಾಸ್ತವ ಸಂಗತಿಯು ಇದ್ದೇ ಇದೆ. ವಾದಿಯು ಟ್ರಸ್ಟಿನ ಫಲಾನುಭವಿಯಾಗಿರುವುದನ್ನು

6ನೇ ಪ್ರತಿವಾದಿಯು ನಿರಾಕರಿಸಿಲ್ಲ. ಆದ್ದರಿಂದ 01.02.2012ರಿಂದ ಪ್ರಾರಂಭವಾಗಿ ಈ ದಿನದವರೆಗೆ ವಾದಿಯ ಪಾಲಿನ ಬಾಡಿಗೆ ಆದಾಯದ ಶೇ.10ಅನ್ನು ಇಂದಿನಿಂದ ಎಂಟು ವಾರಗಳೊಳಗೆ ಅಧಿವಿಚಾರಣಾ ನ್ಯಾಯಾಲಯಕ್ಕೆ ಠೇವಣಿ ಮಾಡುವಂತೆ ಮತ್ತು ಪ್ರಮಾಣಾನುಸಾರ ವೆಚ್ಚಗಳನ್ನು ಭರಿಸಿದ ನಂತರ ಪ್ರತಿತಿಂಗಳು ಒಟ್ಟು ಬಾಡಿಗೆಯ ಶೇ.10ರಷ್ಟನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಠೇವಣಿ ಮಾಡುವುದನ್ನು ಮುಂದುವರಿಸುವಂತೆ 6ನೇ ಪ್ರತಿವಾದಿಗೆ ನಿರ್ದೇಶಿಸಿದರೆ ನ್ಯಾಯೋದ್ದೇಶವನ್ನು ಈಡೇರಿಸಿದಂತಾಗುತ್ತದೆ ಎಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ. ಹಾಗೆ ಠೇವಣಿ ಮಾಡಿದ ನಂತರ ಅಧಿವಿಚಾರಣಾ ನ್ಯಾಯಾಲಯವು ಅದನ್ನು ಪ್ರಾರಂಭದಲ್ಲಿ ಎರಡು ವರ್ಷಗಳ ಅವಧಿಗೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ಇಡತಕ್ಕದ್ದು ಮತ್ತು ಮೊಕದ್ದಮೆಯಲ್ಲಿ ಯಶಸ್ವಿಯಾದ ಪಕ್ಷಕಾರನು ಬಡ್ಡಿ ಸಹಿತವಾಗಿ ನಿಶ್ಚಿತ ಠೇವಣಿಯ ಉತ್ಪತ್ತಿಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗುತ್ತಾನೆ ಎಂಬುದನ್ನು ಹೇಳುವ ಅಗತ್ಯವಿಲ್ಲ.

7. 6ನೇ ಪ್ರತಿವಾದಿಯು ಠೇವಣಿ ಮಾಡತಕ್ಕ ಶೇ.10ರ ಮಟ್ಟಿಗೆ ಅದು ಇಲ್ಲಿಂದ ಇನ್ನು ಮುಂದೆ ದಾವೆಯ ಫಲಿತಾಂಶಕ್ಕೆ ಒಳಪಟ್ಟಿರುತ್ತದೆ ಮತ್ತು ಸದರಿ ಮೊತ್ತವನ್ನು ಹಿಂಪಡೆಯುವುದಕ್ಕಾಗಿ ವಾದಿಯು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅಗತ್ಯ ಅರ್ಜಿಯನ್ನು ಸಲ್ಲಿಸಲು ಸ್ವತಂತ್ರನಾಗಿರುತ್ತಾನೆ ಹಾಗೂ ಅಂಥ ಒಂದು ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಟ್ರಸ್ಟ್ ಭರಿಸಬಹುದಾದ ವೆಚ್ಚಗಳನ್ನು ಪರಿಗಣನೆಗೆ ತೆಗೆದುಕೊಂಡು ಗುಣಾವಗುಣಗಳ ಮೇಲೆ ಮತ್ತು ಕಾನೂನಿಗೆ ಅನುಸಾರವಾಗಿ ಅದನ್ನು ಪರಿಶೀಲಿಸಿ, ಎರಡೂ ಕಡೆಯ ಪಕ್ಷಕಾರರಿಗೂ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡುವ ಮೂಲಕ ತಾನು ಸೂಕ್ತವೆಂದು

ಭಾವಿಸಬಹುದಾದಂಥ ಮೊತ್ತವನ್ನು ಬಿಡುಗಡೆ ಮಾಡಲು ಆದೇಶಿಸತಕ್ಕದ್ದು.

6ನೇ ಪ್ರತಿವಾದಿಯು, ಬಾಡಿಗೆದಾರರು ಟ್ರಸ್ಟಿಗೆ ಸಂದಾಯ ಮಾಡುತ್ತಿರುವ ಬಾಡಿಗೆ ವಿವರಗಳ ಜೊತೆಗೆ ಅಂಥ ಬಾಡಿಗೆದಾರರ ಅಧಿಭೋಗದಲ್ಲಿರುವ ಬಾಡಿಗೆ ಸ್ವತ್ತುಗಳ ವಿವರಗಳನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಒದಗಿಸತಕ್ಕದ್ದು.

ತದನುಸಾರವಾಗಿ ಮೇಲ್ಮನವಿಯನ್ನು ವಿಲೆ ಮಾಡಲಾಗಿದೆ".

8. ಮೇಲ್ಕಂಡ ಆದೇಶವನ್ನು ಅನುಸರಿಸಿ, ವಾದಿಯು, ಸೋನಾ ಟವರ್ಸ್‌ನಿಂದ ಪ್ರಾಪ್ತವಾದ ಬಡ್ಡಿಗಳನ್ನು ಠೇವಣಿ ಮಾಡಲು 6ನೇ ಪ್ರತಿವಾದಿಗೆ ನಿರ್ದೇಶಿಸುವಂತೆ ಕೋರಿ ಪ್ರಶ್ನಿತ ಅರ್ಜಿಯನ್ನು ಎಂದರೆ, ಐ.ಎ.1/2015 ಅನ್ನು ದಾಖಲಿಸಿದ್ದಾಳೆ. ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸಲ್ಲಿಸಲಾದ, 05.01.2013ರಂದು ವಜಾಗೊಳಿಸಲಾದ ಐ.ಎ.1 ಅರ್ಜಿಯಲ್ಲಿ ವಾದಿಯು ಕೋರಿದ ಕೋರಿಕೆಯು ಮೇಲ್ಮನವಿಯ ಜೊತೆಯಲ್ಲಿ ಸಲ್ಲಿಸಲಾದ ಐ.ಎ.1/2013 ಅರ್ಜಿಯಲ್ಲಿ ಕೋರಿದ ಪರಿಹಾರಕ್ಕೆ ಸಂವಾದಿ ಮತ್ತು ಹೋಲಿಕೆಯುಳ್ಳದ್ದಾಗಿದೆಯೆಂಬುದನ್ನು ಈ ಹಂತದಲ್ಲಿಯೇ ಗಮನಿಸಬಹುದಾಗಿದೆ. ಈಗಾಗಲೇ ಈ ಮೇಲೆ ಗಮನಿಸಿದಂತೆ, ಪಕ್ಷಕಾರರ ಎದುರು–ಬದರು ವಾದಗಳನ್ನು ಆಲಿಸಿದ ನಂತರ ಈ ನ್ಯಾಯಾಲಯವು 6ನೇ ಪ್ರತಿವಾದಿಗೆ ಕೆಲವು ನಿರ್ದೇಶನಗಳನ್ನು ನೀಡಿ ಪ್ರಧಾನ ಮೇಲ್ಮನವಿಯನ್ನೇ ವಿಲೆ ಮಾಡಿತ್ತು. ಈ ವಾಸ್ತವ ಸಂಗತಿಗಳ ಹಿನ್ನೆಲೆಯಲ್ಲಿ 6ನೇ ಪ್ರತಿವಾದಿಯ ಪರ ಹಾಜರಾದ ಮಾನ್ಯ ನ್ಯಾಯವಾದಿಯು ವಾದಿಸಿದಂತೆ ಈ ನ್ಯಾಯಾಲಯವು ದಿನಾಂಕ 28.11.2014ರ ನಂತರ ಕಾರ್ಯಾಂತ ನಿವೃತ್ತವಾಗುತ್ತದೆಯೇ ಅಥವಾ ಅದು ಇನ್ನೂ ಹೆಚ್ಚಿನ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನು ಹೊಂದಿರುತ್ತದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಸಿವಿಲ್ ಪ್ರಕ್ರಿಯಾ ಸಂಹಿತೆಯ 2(9)ನೇ ಪ್ರಕರಣವು 'ತೀರ್ಪು' ಎಂಬ ಪದವನ್ನು ಈ ಕೆಳಕಂಡಂತೆ ಪರಿಭಾಷಿಸುತ್ತದೆ:

'ತೀರ್ಪು' ಎಂದರೆ, ಡಿಕ್ರಿಯ ಅಥವಾ ಆದೇಶದ ಬಗ್ಗೆ ನ್ಯಾಯಾಧೀಶರು ಕೊಟ್ಟ ಆಧಾರಗಳ ಹೇಳಿಕೆ."

ಸಿವಿಲ್ ಪ್ರಕ್ರಿಯಾ ಸಂಹಿತೆಯ 2(14)ನೇ ಪ್ರಕರಣದ ಅಡಿಯಲ್ಲಿ "ಆದೇಶ" ಎಂಬ ಪದವನ್ನೂ ಕೂಡ ಪರಿಭಾಷಿಸಲಾಗಿದ್ದು, ಅದು ಈ ಕೆಳಕಂಡಂತಿದೆ:

"ಆದೇಶ" ಎಂದರೆ, ಡಿಕ್ರಿಯಲ್ಲದ, ಸಿವಿಲ್ ನ್ಯಾಯಾಲಯದ ಯಾವುದೇ ತೀರ್ಮಾನದ ವಿಧ್ಯುಕ್ತ ಅಭಿವ್ಯಕ್ತಿ".

ಕ್ರಮಾದೇಶ – XLIರ ನಿಯಮಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಕ್ರಮಾದೇಶ – XLIIIರ ನಿಯಮ–2ರಲ್ಲಿ ಸೂಚಿಸಿದಂತೆ, ಆದೇಶಗಳಿಂದ ಮೇಲ್ಮನವಿಗಳವರೆಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗುತ್ತದೆ. ಸಬ್ಜೆಕ್ಟ್ ಅಪೀಲನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ – XLIIIರ ನಿಯಮ–1 (ಆರ್) ಅಡಿಯಲ್ಲಿ ಸಲ್ಲಿಸಲಾಗಿತ್ತು. ಅದರಂತೆ, ಸಬ್ಜೆಕ್ಟ್ ಅಪೀಲಿನಲ್ಲಿ ಹೊರಡಿಸಿದ ತೀರ್ಪು/ಆದೇಶವು ಎಂದರೆ, ದಿನಾಂಕ 28.11.2014ರ ಆದೇಶವು ನೇರವಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 2(9) ಮತ್ತು 2(14)ರ ಖಂಡದ ಅರ್ಥವ್ಯಾಪ್ತಿಗೆ ಬರುತ್ತದೆ.

ಕ್ರಮಾದೇಶ – XX ರ (3)ನೇ ಉಪ–ನಿಯಮವು, ಒಮ್ಮೆ ತೀರ್ಪನ್ನು ಮುಕ್ತ ನ್ಯಾಯಾಲಯದಲ್ಲಿ ಶೀಘ್ರಲಿಪಿಗಾರರಿಗೆ ಉಕ್ತ ಲೇಖನ ನೀಡಿ ಅದಕ್ಕೆ ಸಹಿ ಮಾಡಿದ ಕೂಡಲೇ 152ನೇ ಪ್ರಕರಣದ ಮೂಲಕ ಉಪಬಂಧಿಸಿದುದನ್ನುಳಿದು ಅಥವಾ ಪುನರ್ ಪರಿಶೀಲನೆಯ ಹೊರತು ಅದನ್ನು ಮಾರ್ಪಡಿಸಲಾಗದು ಅಥವಾ ಅದಕ್ಕೆ ಸೇರ್ಪಡೆಗೊಳಿಸಲಾಗದು ಎಂಬುದನ್ನು ಸೂಚಿಸುತ್ತದೆ.

ಕ್ರಮಾದೇಶ – XXರ (3)ನೇ ನಿಯಮವು ಕರ್ನಾಟಕದಲ್ಲಿ ತಿದ್ದುಪಡಿಯಾದಂತೆ ಈ ಕೆಳಕಂಡಂತಿದೆ:

> "ತೀರ್ಪನ್ನು ಘೋಷಿಸುವ ಕಾಲದಲ್ಲಿ ನ್ಯಾಯಾಧೀಶನು ಬಹಿರಂಗ ನ್ಯಾಯಾಲಯದಲ್ಲಿ ಅದಕ್ಕೆ ದಿನಾಂಕವನ್ನು ನಮೂದಿಸತಕ್ಕದ್ದು ಮತ್ತು ಸಹಿಯನ್ನು ಹಾಕತಕ್ಕದ್ದು ಮತ್ತು ಹಾಗೆ ಒಮ್ಮೆ ಸಹಿ ಮಾಡಿದರೆ, 152ನೇ ಪ್ರಕರಣದ ಮೂಲಕ ಉಪಬಂಧಿಸಿದಂತೆ ಹೊರತು ಅಥವಾ ಪುನರವಲೋಕನದ ಮೇಲೆ ಹೊರತು ಇತರ ಯಾವುದೇ ಸಂದರ್ಭಗಳಲ್ಲಿ ಅದನ್ನು ವ್ಯತ್ಯಾಸ ಮಾಡತಕ್ಕದ್ದಲ್ಲ ಅಥವಾ ಅದಕ್ಕೆ ಏನನ್ನೂ ಸೇರಿಸತಕ್ಕದ್ದಲ್ಲ. ಆದರೆ, ಮುಕ್ತ ನ್ಯಾಯಾಲಯದಲ್ಲಿ ಶೀಘ್ರಲಿಪಿಗಾರನಿಗೆ ಉಕ್ತ ಲೇಖನ ನೀಡುವ ಮೂಲಕ ನ್ಯಾಯಾಧೀಶನು ತೀರ್ಪನ್ನು ಘೋಷಿಸಿರುವಲ್ಲಿ, ಹಾಗೆ ಘೋಷಿಸಲಾಗಿರುವ ತೀರ್ಪಿನ ಹಸ್ತ ಪ್ರತಿಯನ್ನು ಅಗತ್ಯವೆಂದು ಭಾವಿಸಬಹುದಾದ ರೀತಿಯಲ್ಲಿ ಪುನರವಲೋಕಿಸಿ, ತಿದ್ದಿ ನಂತರ ನ್ಯಾಯಾಧೀಶನು ಅದಕ್ಕೆ ಸಹಿ ಹಾಕತಕ್ಕದ್ದು".
>
> ಕೇವಲ ಮೇಲ್ಕಂಡ ಉಪಬಂಧವನ್ನೇ ಓದಿದರೆ, ತೀರ್ಪನ್ನು ಘೋಷಿಸಿ ಅದಕ್ಕೆ ಸಹಿ ಮಾಡಿದ ಮೇಲೆ ಅದನ್ನು 152ನೆ ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು ಮತ್ತು ಪುನರವಲೋಕನದಲ್ಲಿ ಹೊರತುಪಡಿಸಿ ಅದನ್ನು ಮಾರ್ಪಟುಗೊಳಿಸುವಂತಿಲ್ಲ ಅಥವಾ ಅದಕ್ಕೆ ಏನನ್ನೂ ಸೇರಿಸುವಂತಿಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

9. ಸಿವಿಲ್ ಪ್ರಕ್ರಿಯಾ ಸಂಹಿತೆಯ ಈ ಉಪಬಂಧವು, ವರದಿಯಾದ ***ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು –ವಿರುದ್ಧ– ಎಸ್.ಎನ್. ಗೋಯಲ್***[1],

1. (2008) 8 ಎಸ್‌ಸಿಸಿ 92

ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವ್ಯಾಖ್ಯಾನಿಸಿರುವ ವಸ್ತು ವಿಷಯವಾಗಿದ್ದು, ಸದರಿ ಉಪಬಂಧವನ್ನು ವಿಶ್ಲೇಷಿಸಿದ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ನಿರ್ಣಯಿಸಿದೆ:

> "28. ನಾವು ಮೊದಲಿಗೆ ಸಿವಿಲ್ ನ್ಯಾಯಾಲಯಗಳಿಗೆ ಸಂಬಂಧಿಸಿದ ಸ್ಥಿತಿಯನ್ನು ಪರಾಮರ್ಶಿಸೋಣ. ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಕ್ರಮಾದೇಶವು ತೀರ್ಪು ಮತ್ತು ಡಿಕ್ರಿಯ ಬಗ್ಗೆ ವ್ಯವಹರಿಸುತ್ತದೆ. 1 ನೇ ನಿಯಮವು ತೀರ್ಪನ್ನು ಘೋಷಣೆ ಮಾಡಿದಾಗಿನ ಸ್ಥಿತಿಯನ್ನು ವಿವರಿಸುತ್ತದೆ. (1)ನೇ ಉಪ–ನಿಯಮವು, ನ್ಯಾಯಾಲಯವು ಮೊಕದ್ದಮೆಯ ವಿಚಾರಣಾ ನಡೆಸಿದ ನಂತರ ಆ ಕೂಡಲೇ ಅಥವಾ ನಂತರ ಕಾರ್ಯ ಸಾಧ್ಯವಾಗಬಹುದಾದಷ್ಟು ಬೇಗನೆ ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ಘೋಷಿಸತಕ್ಕದ್ದು ಮತ್ತು ಮುಂದೆ ಯಾವುದಾದರೂ ದಿನದಂದು ತೀರ್ಪನ್ನು ಘೋಷಿಸಬೇಕಾದಾಗ ಆ ಉದ್ದೇಶಕ್ಕಾಗಿ ಒಂದು ದಿನವನ್ನು ನಿಗದಿಪಡಿಸಿ ಪಕ್ಷಕಾರರಿಗೆ ಅಥವಾ ಅವರ ನ್ಯಾಯವಾದಿಗಳಿಗೆ ಯುಕ್ತ ನೋಟೀಸನ್ನು ನೀಡತಕ್ಕದ್ದೆಂದು ಉಪಬಂಧಿಸುತ್ತದೆ. (3)ನೇ ಉಪ–ನಿಯಮವು, ಶೀಘ್ರಲಿಪಿಗಾರನಿಗೆ ಬಹಿರಂಗ ನ್ಯಾಯಾಲಯದಲ್ಲಿ ಹೇಳಿ ಬರೆಸುವ ಮೂಲಕ ತೀರ್ಪನ್ನು ಘೋಷಿಸಲು [ನ್ಯಾಯಾಧೀಶನು ಉಚ್ಚ ನ್ಯಾಯಾಲಯದಿಂದ ವಿಶೇಷವಾಗಿ ಅಧಿಕಾರವನ್ನು ಪಡೆದಿದ್ದರೆ] ಅವನು ಹಾಗೆ ಮಾಡಬಹುದೆಂದು ಉಪಬಂಧಿಸುತ್ತದೆ. ಅದರ ಪರಂತುಕವು, ನ್ಯಾಯಾಲಯದಲ್ಲಿ ಬಹಿರಂಗವಾಗಿ ಹೇಳಿ ಬರೆಸಿ ತೀರ್ಪನ್ನು ಘೋಷಿಸಿರುವಲ್ಲಿ, ಹಾಗೆ ಘೋಷಿಸಲಾಗಿರುವ ತೀರ್ಪಿನ ಹಸ್ತಪ್ರತಿಯನ್ನು, ಅದರಲ್ಲಿ ಅವಶ್ಯಕವಾಗಬಹುದಾದೆಡೆಯಲ್ಲೆಲ್ಲಾ ತಿದ್ದಿ, ನ್ಯಾಯಾಧೀಶನು ಸಹಿ ಮಾಡತಕ್ಕದ್ದು, ಅದರಲ್ಲಿ ತೀರ್ಪನ್ನು ಘೋಷಿಸಲಾದ ದಿನಾಂಕವನ್ನು ನಮೂದಿಸತಕ್ಕದ್ದು ಮತ್ತು ಅದು ದಾಖಲೆಯ ಭಾಗವಾಗತಕ್ಕದ್ದು

ಎಂದು ಉಪಬಂಧಿಸುತ್ತದೆ. 3ನೇ ನಿಯಮವು, ತೀರ್ಪನ್ನು ಘೋಷಿಸುವ ಕಾಲದಲ್ಲಿ ನ್ಯಾಯಾಧೀಶನು ಬಹಿರಂಗ ನ್ಯಾಯಾಲಯದಲ್ಲಿ ಅದಕ್ಕೆ ದಿನಾಂಕವನ್ನು ನಮೂದಿಸತಕ್ಕದ್ದು ಮತ್ತು ಸಹಿಯನ್ನು ಹಾಕತಕ್ಕದ್ದು ಮತ್ತು ಹಾಗೆ ಒಮ್ಮೆ ಸಹಿ ಮಾಡಿದರೆ, 152ನೇ ಪ್ರಕರಣದ ಮೂಲಕ ಉಪಬಂಧಿಸಿರುವಂತೆ ಹೊರತು ಅಥವಾ ಪುನರವಲೋಕನದ ಹೊರತು ಇತರ ಸಂದರ್ಭಗಳಲ್ಲಿ ತರುವಾಯ ಅದನ್ನು ವ್ಯತ್ಯಾಸ ಮಾಡತಕ್ಕದ್ದಲ್ಲ ಅಥವಾ ಅದಕ್ಕೆ ಏನನ್ನೂ ಸೇರಿಸತಕ್ಕದ್ದಲ್ಲ ಎಂದು ಉಪಬಂಧಿಸುತ್ತದೆ. ಹಾಗಾಗಿ, ತೀರ್ಪನ್ನು ಮುಕ್ತ ನ್ಯಾಯಾಲಯದಲ್ಲಿ ಹೇಳಿ ಬರೆಸುವುದು ಮಾತ್ರವೇ ತೀರ್ಪಿನ ಘೋಷಣೆಗೆ ಸಮನಾಗುತ್ತದೆಯೇ ಹೊರತು ತೀರ್ಪನ್ನು ಕಾದಿರಿಸಿರುವಲ್ಲಿ, ಬರೀ ಹೇಳಿ ಬರೆಸಿರುವುದೇ ತೀರ್ಪಿನ ಘೋಷಣೆಗೆ ಸಮನಾಗುವುದಿಲ್ಲ. ಆದರೆ ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು ಹೇಳಿ ಬರೆಸಿ ಘೋಷಣೆ ಮಾಡಿದ ನಂತರವೂ ಕೂಡ ತೀರ್ಪಿಗೆ ಸಹಿ ಹಾಕಿ ದಿನಾಂಕವನ್ನು ನಮೂದಿಸುವುದಕ್ಕಿಂತ ಮುಂಚೆ ನ್ಯಾಯಾಧೀಶರು ಅಗತ್ಯ ತಿದ್ದುಪಾಟುಗಳನ್ನು ಮಾಡಬಹುದಾಗಿದೆ. ಆದ್ದರಿಂದ (152 ನೇ ಪ್ರಕರಣ ಮತ್ತು ಪುನರವಲೋಕನದ ಅಧಿಕಾರಕ್ಕೊಳಪಟ್ಟು) ನ್ಯಾಯಾಧೀಶನು ತೀರ್ಪನ್ನು ಘೋಷಿಸಿ, ಸಹಿ ಮಾಡಿ, ದಿನಾಂಕವನ್ನು ನಮೂದಿಸಿದಾಗ ಕಾರ್ಯಾಂತ ನಿವೃತ್ತನಾಗುತ್ತಾನೆ (becomes functus officio). ಈ ಸ್ಥಿತಿಯು ಅರೆ–ನ್ಯಾಯಿಕ ಪ್ರಾಧಿಕಾರಗಳಿಗೆ ಸಂಬಂಧಿಸಿರುವುದಕ್ಕಿಂತ ಭಿನ್ನವಾಗಿದೆ".

10. ನಿರ್ದೇಶನ ನೀಡುವಂತೆ ಕೋರಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದಡಿಯಲ್ಲಿ ಸಲ್ಲಿಸಲಾದ ಪ್ರಸ್ತುತ ಅರ್ಜಿಯಲ್ಲಿ ಕೋರಿದ ಕೋರಿಕೆಯು ಅದೇ ಮೇಲ್ಮನವಿದಾರನೇ ಸಿಪಿಸಿ ಕ್ರಮಾದೇಶ 39ರ ನಿಯಮ 1 ಮತ್ತು 2ರ

ಅಡಿಯಲ್ಲಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ಐ.ಎ.1 ಅರ್ಜಿಯಲ್ಲಿ ಕೋರಿದ ಪರಿಹಾರಕ್ಕೆ ಸಂವಾದಿಯಾದುದಾಗಿದೆ ಮತ್ತು ಅದೇ ಪರಿಹಾರವನ್ನೇ ಎಂ.ಎಫ್.ಎ. 2206/2013 ಮೇಲ್ಮನವಿಯಲ್ಲಿ ವಾದಿಯು ಈ ನ್ಯಾಯಾಲಯದ ಮುಂದೆ ಕೋರಿದ್ದಾನೆ ಎಂಬ ಸಂಗತಿಯು ನಿರ್ವಿವಾದವಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 152ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ ನ್ಯಾಯಾಲಯವು ತೀರ್ಪು ಅಥವಾ ಆದೇಶದಲ್ಲಿ ನುಸುಳಬಹುದಾದ ಅಂಕಿ ಸಂಖ್ಯೆ ಮತ್ತು ಲಿಪಿಕ ದೋಷಗಳನ್ನು ಮಾತ್ರವೇ ಸರಿಪಡಿಸಬಹುದೆಂಬ ಪ್ರತಿಪಾದನೆಯ ಬಗ್ಗೆಯೂ ಯಾವುದೇ ವಿವಾದವಿರುವುದಕ್ಕೆ ಸಾಧ್ಯವಿಲ್ಲ. ಆ ಬಗ್ಗೆ ಸ್ವತಃ ಪ್ರಕರಣದಲ್ಲಿಯೇ ವ್ಯಕ್ತವಾಗಿದೆ ಮತ್ತು ಸ್ಪಷ್ಟವಾಗಿದೆ. ಆದರೆ, ಉದ್ಭವವಾಗುವ ಪ್ರಾಸಂಗಿಕ ಪ್ರಶ್ನೆಯೇನೆಂದರೆ, ಈ ನ್ಯಾಯಾಲಯಕ್ಕೆ ಅದು ಈಗಾಗಲೇ ಹೊರಡಿಸಿದ ಆದೇಶವನ್ನು ಮಾರ್ಪಾಡು ಮಾಡುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸುವ ಅಧಿಕಾರವನ್ನು ಹೊಂದಿದೆಯೇ ಎಂಬುದಾಗಿದೆ. ಈ ಪ್ರತಿಪಾದನೆಯನ್ನು ಬೆಂಬಲಿಸುವುದಕ್ಕೆ ಮತ್ತು ಇದಕ್ಕೆ ಉತ್ತರ ಸಕಾರಾತ್ಮಕವಾಗಿದೆ ಎಂದು ವಾದಿಸುವುದಕ್ಕೆ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎನ್.ಎಸ್. ನಾಗಾನಂದ್ ವರದಿಯಾದ ***ಮೆ|| ಜೈಪುರ್ ಮಿನರಲ್ ಡೆವಲಪ್‌ಮೆಂಟ್ ಸಿಂಡಿಕೇಟ್, ಜೈಪುರ್ –ವಿರುದ್ಧ– ಆದಾಯ ತೆರಿಗೆ ಆಯುಕ್ತರು, ನವದೆಹಲಿ***[2], ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಆಧಾರವಾಗಿಟ್ಟುಕೊಂಡು, ಆ ತೀರ್ಪಿನಲ್ಲಿ, ಪಕ್ಷಕಾರನು ಹಾಜರಾಗಿಲ್ಲದಿರುವ ಕಾರಣದಿಂದ ಅದಕ್ಕೆ ಒಪ್ಪಿಸಿದ ಪ್ರಶ್ನೆಗೆ ಉತ್ತರ ನೀಡಲು ನಿರಾಕರಿಸಿ ಒಮ್ಮೆ ಆದೇಶ ಹೊರಡಿಸಿದ ಉಚ್ಚ ನ್ಯಾಯಾಲಯಕ್ಕೆ ಅದು ಕಾರ್ಯಾಂತ ನಿವೃತ್ತವಾಗದಿರುವುದರಿಂದ ಗುಣಾವಗುಣಗಳ ಮೇಲೆ ನಿರ್ಣಯ ನೀಡುವುದಕ್ಕಾಗಿ ಆದೇಶವನ್ನು ಹೊರಡಿಸಲು ಯಾವುದೇ ಅಡ್ಡಿಯಿರುವುದಿಲ್ಲವೆಂದು ನಿರ್ಣಯಿಸಲಾಗಿದೆ.

> "5. ವಿವಿಧ ಕಾರಣಗಳಿಗಾಗಿ ಮೊಕದ್ದಮೆಯ ವಿಚಾರಣೆಯಲ್ಲಿ ಹಾಜರಾಗುವುದರಿಂದ ಪಕ್ಷಕಾರನನ್ನು ಅಥವಾ ಆತನ

2. (1977) 1 ಎಸ್‌ಸಿಸಿ 508

ನ್ಯಾಯವಾದಿಯನ್ನು ಪ್ರತಿಬಂಧಿಸಬಹುದು. ಅಂಥ ಒಬ್ಬ ಪಕ್ಷಕಾರನು, ಉಚ್ಚ ನ್ಯಾಯಾಲಯವು ಮೊಕದ್ದಮೆಯ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿ ಹೊರಡಿಸಿದ ಆದೇಶದ ತರುವಾಯ, ತಾನು ಹಾಜರಾಗದಿರುವುದಕ್ಕೆ ಸಾಕಷ್ಟು ಕಾರಣವಿದೆಯೆಂದು ತೋರಿಸಿದ ಸಂದರ್ಭದಲ್ಲಿ, ಉಚ್ಚ ನ್ಯಾಯಾಲಯವು ತನ್ನ ಮುಂಚಿನ ಆದೇಶವನ್ನು ವಾಪಸ್ ತರಿಸಿಕೊಂಡು ಗುಣಾವಗುಣಗಳ ಮೇಲೆ ಆ ಮೊಕದ್ದಮೆಯನ್ನು ವಿಲೆ ಮಾಡುವ ಅಂತರ್ನಿಹಿತ ಅಧಿಕಾರವನ್ನು ಹೊಂದಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ. ಪಕ್ಷಕಾರನು ಹಾಜರಾಗದಿರುವುದಕ್ಕೆ ಕಾರಣ ಏನೇ ಇರಬಹುದು. ಆದರೆ ಆ ಪಕ್ಷಕಾರನು ಹಾಜರಾಗದಿರುವ ಕಾರಣದಿಂದ ಉಚ್ಚ ನ್ಯಾಯಾಲಯಕ್ಕೆ ಪರಾಮರ್ಶೆಗೆ ಒಪ್ಪಿಸಿದ ಪ್ರಶ್ನೆಯನ್ನು ಉತ್ತರಿಸಲು ನಿರಾಕರಿಸಿ ಉಚ್ಚ ನ್ಯಾಯಲಯವು ಆದೇಶವನ್ನು ಹೊರಡಿಸಿದ ಕೂಡಲೇ ಅದು ಕಾರ್ಯಾಂತ ನಿವೃತ್ತವಾಗುತ್ತದೆ ಅಥವಾ ಅಸಹಾಯಕವಾಗುತ್ತದೆ ಮತ್ತು ಗುಣಾವಗುಣಗಳ ಮೇಲೆ ಮೊಕದ್ದಮೆಯನ್ನು ವಿಲೆ ಮಾಡುವುದಕ್ಕೆ ಆದೇಶವನ್ನು ಹೊರಡಿಸುವಂತಿಲ್ಲ ಎಂಬ ಅಭಿಪ್ರಾಯವನ್ನು ಸಮ್ಮತಿಸುವುದು ಕಷ್ಟಕರವೆಂಬುದು ನಮ್ಮ ಅರಿವಿಗೆ ಬಂದಿದೆ. ಈಗಾಗಲೇ ಸೂಚಿಸಿರುವಂತೆ, ಸೂಕ್ತ ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯವು ಪಕ್ಷಕಾರನ ಗೈರುಹಾಜರಿಯಲ್ಲಿ ಹೊರಡಿಸಿದ ಆದೇಶವನ್ನು ವಾಪಸ್ ತರಿಸಿಕೊಂಡು ಗುಣಾವಗುಣಗಳ ಮೇಲೆ ಮೊಕದ್ದಮೆಯನ್ನು ವಿಲೆ ಮಾಡುವ ಅಂತರ್ನಿಹಿತ ಅಧಿಕಾರವನ್ನು ಹೊಂದಿರುತ್ತದೆ. ಗುಣಾವಗುಣಗಳ ಮೇಲೆ ಮೊಕದ್ದಮೆಯ ಪ್ರಶ್ನೆಯನ್ನು ವಿಲೆ ಮಾಡುವುದಕ್ಕೆ ಆದೇಶ ಹೊರಡಿಸುವುದರಿಂದ ಉಚ್ಚ ನ್ಯಾಯಾಲಯಕ್ಕೆ ಅಡ್ಡಿ ಬರುವಂತಹದ್ದು, ಅಧಿನಿಯಮದ ಯಾವುದೇ ಉಪಬಂಧಗಳಲ್ಲಿ ವ್ಯಕ್ತವಾಗಿರುವ ಅಥವಾ ಅಗತ್ಯ ಇಂಗಿತ ಸೂಚನೆಯಿರುವ ಯಾವುದು ಏನೂ ಇಲ್ಲ. ವ್ಯಕ್ತವಾದ ಅಥವಾ

ಸೂಚಿತವಾದ ಯಾವುದೇ ಪ್ರತಿಷೇಧವಿಲ್ಲದಿರುವುದರಿಂದ ನ್ಯಾಯೋದ್ದೇಶಗಳನ್ನು ಈಡೇರಿಸುವುದಕ್ಕೆ ಮತ್ತು ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನು ತಡೆಯುವುದಕ್ಕೆ ಅಗತ್ಯವೆನಿಸಬಹುದಾದಂಥ ಆದೇಶವನ್ನು ಹೊರಡಿಸಲು ನ್ಯಾಯಾಲಯಗಳಿಗೆ ಅಧಿಕಾರವಿದೆ. ಬೇರೆ ರೀತಿಯಲ್ಲಿ ನಿರ್ಣಯಿಸಿದರೆ ಹಲವಾರು ಮೊಕದ್ದಮೆಗಳಲ್ಲಿ ಸಂಪೂರ್ಣವಾಗಿ ನ್ಯಾಯ ವಿಫಲತೆ ಕಾಣುವುದಕ್ಕೆ ಕಾರಣವಾಗುತ್ತದೆ. ಉದಾಹರಣೆಗೆ, ಒಂದು ವೇಳೆ, ಮೊಕದ್ದಮೆಯ ಪ್ರಶ್ನೆಯನ್ನು ವಿಚಾರಣೆಗೆ ತೆಗೆದುಕೊಳ್ಳುವ ಅವಧಿಯಲ್ಲಿ ಪಕ್ಷಕಾರನು ಉಚ್ಚ ನ್ಯಾಯಾಲಯಕ್ಕೆ ಬರುವಾಗ ದಾರಿಯಲ್ಲಿ ಅವನು ಅಪಘಾತಕ್ಕೀಡಾಗಬಹುದು. ಅಂಥ ಒಂದು ಸಂದರ್ಭದಲ್ಲಿ ಉಚ್ಚ ನ್ಯಾಯಾಲಯವು ಮುಂದೆ ಅಪಘಾತಕ್ಕೀಡಾದ ವ್ಯಕ್ತಿಯ ಗೈರು ಹಾಜರಿ ಕಾರಣದಿಂದ ಮೊಕದ್ದಮೆಯ ಪ್ರಶ್ನೆಯನ್ನು ಉತ್ತರಿಸಲು ನಿರಾಕರಿಸಿ ಆದೇಶವನ್ನು ಹೊರಡಿಸುವ ಸಾಧ್ಯತೆಯಿರುತ್ತದೆ. ಅಂಥ ಒಂದು ಸಂದರ್ಭದಲ್ಲಿ ಸಂಪೂರ್ಣ ವಾಸ್ತವ ಸಂಗತಿಗಳನ್ನು ಉಚ್ಚ ನ್ಯಾಯಾಲಯದ ಗಮನಕ್ಕೆ ತಂದರೂ ಕೂಡ ಉಚ್ಚ ನ್ಯಾಯಾಲಯವು ಸದರಿ ಆದೇಶವನ್ನು ವಾಪಸ್ ತರಿಸಿಕೊಂಡು ಗುಣಾವಗುಣಗಳ ಮೇಲೆ ಮೊಕದ್ದಮೆಯ ಪ್ರಶ್ನೆಯನ್ನು ವಿಲೆ ಮಾಡುವುದಕ್ಕೆ ಆದೇಶವನ್ನು ಹೊರಡಿಸುವಂತಿಲ್ಲ ಎಂದು ನಿರ್ಣಯಿಸುವುದು ಸಂಪೂರ್ಣವಾಗಿ ನ್ಯಾಯದ ವಿಫಲತೆಗೆ ಕಾರಣವಾಗುತ್ತದೆ. ಅಂಥ ಪರಿಸ್ಥಿತಿಗಳನ್ನು ನಿಭಾಯಿಸುವುದಕ್ಕೆ ನ್ಯಾಯಾಲಯಗಳು ಸೂಕ್ತ ಮೊಕದ್ದಮೆಗಳಲ್ಲಿ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಬಹುದಾಗಿದೆ. ಅಂತರ್ನಿಹಿತ ಅಧಿಕಾರವನ್ನು ಚಲಾಯಿಸುವಾಗ, ನ್ಯಾಯಾಲಯಗಳು ಕಾನೂನಿನ ವ್ಯಕ್ತ ಉಪಬಂಧಗಳನ್ನು ಅಧ್ಯಾರೋಹಿಸುವಂತಿಲ್ಲ. ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿರುವಂತೆ, ಪಕ್ಷಕಾರನ ಗೈರು ಹಾಜರಿಯ ಕಾರಣದಿಂದ ಮುಂಚಿನ ಆದೇಶವನ್ನು ವಾಪಸ್

> ತರಿಸಿಕೊಳ್ಳುವುದಕ್ಕೆ ಮತ್ತು ಗುಣಾವಗುಣಗಳ ಮೇಲೆ ಮೊಕದ್ದಮೆಯ ಪ್ರಶ್ನೆಯನ್ನು ವಿಲೆ ಮಾಡುವುದಕ್ಕೆ ವ್ಯಕ್ತವಾದ ಅಥವಾ ಸೂಚಿತವಾದ ಯಾವುದೇ ಪ್ರತಿಷೇಧವೂ ಇಲ್ಲದಿರುವಲ್ಲಿ, ನ್ಯಾಯಾಲಯಗಳು ಅಂಥ ಅಧಿಕಾರವನ್ನು ಚಲಾಯಿಸಲು ಹಿಂಜರಿಯಬಾರದು. ಆದರೆ ಸಂಬಂಧಪಟ್ಟ ಪಕ್ಷಕಾರನು ವಿಚಾರಣೆಯ ದಿನಾಂಕದಂದು ಯುಕ್ತ ಶ್ರದ್ಧೆಯಿಂದ ನ್ಯಾಯಾಲಯಕ್ಕೆ ಬಂದು ತನ್ನ ಗೈರುಹಾಜರಿಗೆ ಸೂಕ್ತ ಕಾರಣವನ್ನು ತೋರಿಸಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ."

11. ಮೇಲ್ಕಂಡ ತೀರ್ಪನ್ನು ಪರಿಶೀಲಿಸಿದ ಮೇಲೆ, ಭಾರತೀಯ ಆದಾಯ ತೆರಿಗೆ ಅಧಿನಿಯಮ, 1922ರ ಅಡಿಯಲ್ಲಿ ವಾಪಸ್ ತರಿಸಿಕೊಳ್ಳಬೇಕೆಂಬ ಅರ್ಜಿಯನ್ನು ಪುರಸ್ಕರಿಸುವುದಕ್ಕೆ ಯಾವುದೇ ಪ್ರತಿಷೇಧವಿಲ್ಲವೆಂಬುದು ತಿಳಿದು ಬರುತ್ತದೆ ಅಥವಾ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ವಾಪಸ್ ತರಿಸಿಕೊಳ್ಳುವುದಕ್ಕಾಗಿ ಒಂದು ಆದೇಶವನ್ನು ಹೊರಡಿಸಲು ಯಾವುದೇ ವ್ಯಕ್ತ ಅಥವಾ ಸೂಚಿತ ಉಪಬಂಧ ಇಲ್ಲದಿರುವಲ್ಲಿ, ನ್ಯಾಯೋದ್ದೇಶಗಳನ್ನು ಈಡೇರಿಸುವುದಕ್ಕೆ ಅಥವಾ ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನು ತಡೆಯುವುದಕ್ಕೆ ಅದು ವಾಪಸ್ ತರಿಸಿಕೊಳ್ಳುವ ಅಧಿಕಾರವನ್ನು ಹೊಂದಿದೆಯೆಂದು ಮೇಲ್ಕಂಡ ತೀರ್ಪಿನಲ್ಲಿ ನಿರ್ಣಯಿಸಲಾಗಿದೆ. ಸದರಿ ಮೊಕದ್ದಮೆಯಲ್ಲಿ ಕಂಡು ಬರುವ ವಾಸ್ತವ ಸಂಗತಿಗಳಲ್ಲಿ ನಮ್ಮ ಗಮನಕ್ಕೆ ಬರುವ ವಿಷಯವೇನೆಂದರೆ, ಅಧಿನಿಯಮದ 66(1)ನೇ ಪ್ರಕರಣದ ಅಡಿಯಲ್ಲಿ ಆದಾಯ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣವು ಉಚ್ಚ ನ್ಯಾಯಾಲಯದ ಪರಾಮರ್ಶೆಗೆ ಒಪ್ಪಿಸಿದ ವಿವಾದಾಂಶವನ್ನು ಉಚ್ಚ ನ್ಯಾಯಾಲಯವು ಅಂಗೀಕರಿಸಿ, ಅದು ಮೇಲ್ಮನವಿದಾರ/ತೆರಿಗೆದಾರನಿಗೆ ಹಾಜರಾಗುವಂತೆ ಅಷ್ಟೇ ಅಲ್ಲದೆ ದಾಖಲೆ ಪತ್ರ ಪುಸ್ತಕಗಳನ್ನೂ ಕೂಡ ಸಲ್ಲಿಸುವಂತೆ ಆತನ ಮೇಲೆ ನೋಟೀಸನ್ನು ಜಾರಿಗೊಳಿಸಿತು. ಆದರೆ ಯಾರ ಸಂಬಂಧದಲ್ಲಿ ಪರಾಮರ್ಶನೆಗೆ ವಿವಾದಾಂಶವನ್ನು ಒಪ್ಪಿಸಲಾಗಿತ್ತೋ ಆ ತೆರಿಗೆದಾರನು ನೋಟೀಸನ್ನು ಜಾರಿ ಮಾಡಿದ್ದಾಗ್ಯೂ ಕೂಡ ವಿಚಾರಣೆಗೆ ಹಾಜರಾಗುವುದಿರಲಿ ಪತ್ರ ಪುಸ್ತಕಗಳನ್ನೂ ಕೂಡ ಸಲ್ಲಿಸಲಿಲ್ಲವೆಂಬುದನ್ನು

ಕಾಣುತ್ತೇವೆ. ಹಾಗಾಗಿ, ಉಚ್ಚ ನ್ಯಾಯಾಲಯವು ಆ ಪರಾಮರ್ಶಿತ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿ, ದಿನಾಂಕ 26.08.1970ರ ಆದೇಶದ ಮೂಲಕ ಉತ್ತರಿಸಲು ನಿರಾಕರಿಸಿದ ಸದರಿ ಮೊಕದ್ದಮೆಯನ್ನು ವಿಲೆ ಮಾಡಿತ್ತು. ಆದ್ದರಿಂದ, ತೆರಿಗೆದಾರನು ಪತ್ರ ಪುಸ್ತಕಗಳನ್ನು ಸಲ್ಲಿಸುವುದಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಿ ಮೊಕದ್ದಮೆಯ ಮರು ವಿಚಾರಣೆ ಮಾಡುವಂತೆ ಕೋರಿದ್ದನು, ಪರಾಮರ್ಶಿತ ಪ್ರಶ್ನೆಯನ್ನು ಉತ್ತರಿಸುವುದಕ್ಕೆ ನಿರಾಕರಿಸಿರುವ ನ್ಯಾಯಾಲಯದ ಮುಂಚಿನ ಆದೇಶದ ಕಾರಣದಿಂದ ನ್ಯಾಯಾಲಯವು ಆ ಅರ್ಜಿಯನ್ನು ಪುರಸ್ಕರಿಸಲು ಕಾರ್ಯಾಂತ ನಿವೃತ್ತವಾಗಿದೆ ಎಂಬ ಆಧಾರದ ಮೇಲೆ ಆ ಅರ್ಜಿಯನ್ನು ವಜಾಗೊಳಿಸಲಾಗಿತ್ತು. ಮರು ವಿಚಾರಣೆ ಮಾಡುವಂತೆ ಕೋರಿದ ಅರ್ಜಿಯನ್ನು ವಜಾಗೊಳಿಸಿದ ಈ ಆದೇಶವೇ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿನ ಮೇಲ್ಮನವಿಯ ವಸ್ತು ವಿಷಯವಾಗಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಈ ಹಿನ್ನೆಲೆಯಲ್ಲಿಯೇ ಪಕ್ಷಕಾರನ ಗೈರು ಹಾಜರಿಯಲ್ಲಿ ಹೊರಡಿಸಿದ ಆದೇಶವನ್ನು ಸೂಕ್ತ ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯವು ವಾಪಸ್ ತರಿಸಿಕೊಳ್ಳುವ ಅಂತರ್ನಿಹಿತ ಅಧಿಕಾರವನ್ನು ಹೊಂದಿದೆಯೆಂದು ಮತ್ತು ಆದಾಯ ತೆರಿಗೆ ಅಧಿನಿಯಮ, 1922ರ ಉಪಬಂಧಗಳ ಅಡಿಯಲ್ಲಿ ಗುಣಾವಗುಣಗಳ ಮೇಲೆ ಆ ಮೊಕದ್ದಮೆಯ ಪ್ರಶ್ನೆಯನ್ನು ವಿಲೆ ಮಾಡುವುದಕ್ಕೆ ಉಚ್ಚ ನ್ಯಾಯಾಲಯಕ್ಕೆ ಅಡ್ಡಿಯಿದೆಯೆಂಬುದು ವ್ಯಕ್ತವಾಗಿಯಾಗಲಿ ಅಥವಾ ಅಗತ್ಯ ಸೂಚನೆಯ ಮೂಲಕವಾಗಲಿ ಕಂಡುಬರುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿತ್ತು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಒಂದು ದೃಷ್ಟಾಂತವನ್ನು ನೀಡಿ, ಎಂದರೆ, ಮೊಕದ್ದಮೆಯನ್ನು ವಿಚಾರಣೆಗಾಗಿ ಕೈಗೆತ್ತಿಕೊಂಡ ಅವಧಿಯಲ್ಲಿ ವಿಚಾರಣೆಗೆ ಹಾಜರಾಗಲು ಬರುತ್ತಿದ್ದ ಪಕ್ಷಕಾರನು ಅಪಘಾತಕ್ಕೀಡಾದಲ್ಲಿ ವಿಚಾರಣೆಗೆ ಹಾಜರಾಗಲು ಸಾಧ್ಯವಾಗದಿದ್ದದ್ದು ಹಾಜರಾಗದಿರುವುದಕ್ಕೆ ಒಂದು ಸಕಾರಣವಾಗುತ್ತದೆಂದು ಮತ್ತು ಅಂಥ ಸಂದರ್ಭಗಳಲ್ಲಿ ಮೊಕದ್ದಮೆಯ ಪ್ರಶ್ನೆಯನ್ನು ಉತ್ತರಿಸಲು ನಿರಾಕರಿಸಿ ಹೊರಡಿಸಿದ ಮುಂಚಿನ ತನ್ನ ಆದೇಶವನ್ನು ಉಚ್ಚ ನ್ಯಾಯಾಲಯವು ವಾಪಸ್ ತರಿಸಿಕೊಳ್ಳುವಂತಿಲ್ಲ ಎಂದು ಹೇಳಲಾಗದೆಂದು, ಏಕೆಂದರೆ ಅಂಥ ಒಂದು ನಿಲುವು ನ್ಯಾಯಾ ನಿರ್ವಹಣೆಯು ಸಂಪೂರ್ಣವಾಗಿ ವಿಫಲವಾಗುವುದಕ್ಕೆ ಕಾರಣವಾಗುತ್ತದೆಂದು ಅಭಿಪ್ರಾಯಪಟ್ಟಿದೆ. ಅಂಥ ವಾಪಸ್ ತರಿಸಿಕೊಳ್ಳುವ

ಅಂತರ್ನಿಹಿತ ಅಧಿಕಾರವನ್ನು ಚಲಾಯಿಸುವುದನ್ನು ಪ್ರತಿಷೇಧಿಸುವ ವ್ಯಕ್ತ ಉಪಬಂಧವು ಆದಾಯ ತೆರಿಗೆ ಅಧಿನಿಯಮ, 1922ರಲ್ಲಿ ಕಂಡುಬರುತ್ತಿಲ್ಲವೆಂಬುದನ್ನು ಕೂಡ ಸರ್ವೋಚ್ಚ ನ್ಯಾಯಾಲಯವು ಗಮನಿಸಿದೆ. ಈ ಹಿನ್ನೆಲೆಯಲ್ಲಿ, ಉಚ್ಚ ನ್ಯಾಯಾಲಯವು ಕಾರ್ಯಾಂತ ನಿವೃತ್ತವಾಗಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ.

12. ಈ ಮೂಲತತ್ವಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಮೇಲೆ ಉಲ್ಲೇಖಿಸಿದ ***ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು –ವಿರುದ್ಧ– ಎಸ್.ಎನ್. ಗೋಯಲ್,*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ ಕಾನೂನನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ವಸ್ತು ಸ್ಥಿತಿಯನ್ನು ಪರಿಶೀಲಿದಾಗ, ಈಗಾಗಲೇ ಹೊರಡಿಸಲಾದ ಆದೇಶವನ್ನು ಮಾರ್ಪಾಟುಗೊಳಿಸುವ ಅಥವಾ ವ್ಯತ್ಯಸ್ತಗೊಳಿಸುವ ಸಿಪಿಸಿ 152ನೇ ಪ್ರಕರಣದಡಿಯಲ್ಲಿನ ಉಚ್ಚ ನ್ಯಾಯಾಲಯದ ಅಧಿಕಾರವು ಸಿಪಿಸಿ ಕ್ರಮಾದೇಶ–XX ರ ನಿಯಮ (3)ರ ಪರಿಮಿತಿಗೊಳಪಟ್ಟಿದೆ. ಮೇಲೆ ಈಗಾಗಲೇ ಗಮನಿಸಿರುವಂತೆ, ಸಿಪಿಸಿ 152ನೇ ಪ್ರಕರಣವು ತೀರ್ಪುಗಳಲ್ಲಿ, ಡಿಕ್ರಿಗಳಲ್ಲಿ ಅಥವಾ ಆದೇಶಗಳಲ್ಲಿ ಆಗಿರುವ ಲಿಪಿಕ ಅಥವಾ ಸಾಂಖ್ಯಿಕ ದೋಷಗಳನ್ನು ಅಥವಾ ಅದರಲ್ಲಿ ಆಕಸ್ಮಾತಾಗಿ ಏನಾದರೂ ತಪ್ಪಿಕೊಂಡಿದ್ದರಿಂದ ಅಥವಾ ಬಿಟ್ಟು ಹೋಗಿದ್ದರಿಂದ ಉಂಟಾದ ತಪ್ಪುಗಳನ್ನು ಸರಿಪಡಿಸುವ ಬಗ್ಗೆ ಉಪಬಂಧಿಸುತ್ತದೆ. ಈ ಅಧಿಕಾರವನ್ನು ಚಲಾಯಿಸುವಿಕೆಯು ನ್ಯಾಯಾಲಯವು ಅದರ ಲಿಪಿಕ ಕಾರ್ಯದಲ್ಲಿ ಮಾಡಿದ ತಪ್ಪುಗಳನ್ನು ಸರಿಪಡಿಸುವುದನ್ನು ಉದ್ದೇಶಿಸಿರುತ್ತದೆಯೇ ಹೊರತು, ತೀರ್ಪು, ಡಿಕ್ರಿ ಅಥವಾ ಆದೇಶವನ್ನು ನೀಡಿದ ನಂತರ ಪರಿಣಾಮಕಾರಿಯಾದ ನ್ಯಾಯಿಕ ಆದೇಶವನ್ನು ಹೊರಡಿಸುವುದನ್ನು ಉದ್ದೇಶಿಸಿರುವುದಿಲ್ಲ. ಸಿಪಿಸಿ 152ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಲಾದ ಸರಿಪಡಿಸುವಿಕೆಗಳು ಆಕಸ್ಮಿಕವಾಗಿ ಆದ ಲೋಪ ದೋಷಗಳನ್ನು ಸರಿಪಡಿಸುವುದಕ್ಕೆ, ಸಂಬಂಧಿಸುತ್ತದೆಯೇ ಹೊರತು ನ್ಯಾಯಾಲಯವು ಸಂದರ್ಭಾನುಸಾರ ತೀರ್ಪು, ಡಿಕ್ರಿ ಅಥವಾ ಆದೇಶವನ್ನು ಹೊರಡಿಸುವಾಗ ಮಾಡಿರಬಹುದಾದ ಲೋಪ ದೋಷಗಳನ್ನು ಸರಿಪಡಿಸುವುದಕ್ಕೆ ಸಂಬಂಧಿಸಿಲ್ಲ. ಅಧೀನ ನ್ಯಾಯಾಲಯಗಳು ತೀರ್ಪು ಅಥವಾ ಆದೇಶವನ್ನು ಮಾರ್ಪಾಟುಗೊಳಿಸುವ ಅಥವಾ ವ್ಯತ್ಯಸ್ತಗೊಳಿಸುವ

ಸಿಪಿಸಿ 151 ಮತ್ತು 152ನೇ ಪ್ರಕರಣಗಳ ಅಡಿಯಲ್ಲಿನ ಅವುಗಳ ಅಧಿಕಾರವನ್ನು ಚಲಾಯಿಸುವಲ್ಲಿ ಅವುಗಳು ಕೈಗೊಂಡ ಕಾರ್ಯದ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ವರದಿಯಾದ ***ದ್ವಾರಕ ದಾಸ್ –ವಿರುದ್ಧ– ಮಧ್ಯಪ್ರದೇಶ ರಾಜ್ಯ ಸರ್ಕಾರ ಮತ್ತು ಇನ್ನೊಬ್ಬರು*** [3], ಮೊಕದ್ದಮೆಯಲ್ಲಿ ಈ ಕೆಳಕಂಡಂತೆ ಅಸಮಾಧಾನವನ್ನು ವ್ಯಕ್ತಪಡಿಸಿದೆ:

> "6. ಸಿಪಿಸಿ 152ನೇ ಪ್ರಕರಣವು XXXXX ಅಧೀನ ನ್ಯಾಯಾಲಯಗಳು ತಮ್ಮ ಮುಂದೆ ಇತ್ಯರ್ಥದಲ್ಲಿರುವ **ಪರಿಣಾಮಕಾರಿ ಆದೇಶಗಳನ್ನು ಹೊರಡಿಸಿದ ನಂತರವೂ ಕೂಡ ಸಿಪಿಸಿ 151 ಮತ್ತು 152ನೇ ಪ್ರಕರಣಗಳ ಉಪಬಂಧಗಳನ್ನು ಸ್ವೇಚ್ಛೆಯಿಂದ ಅರ್ಥೈಸಿ ಅನ್ವಯಿಸಿಕೊಳ್ಳುತ್ತಿವೆ ಎಂಬುದನ್ನು** ಗಮನಿಸಲಾಗಿದೆ. **ಮೇಲೆ ಹೇಳಿದ ಪ್ರಕರಣಗಳ ವ್ಯಾಪ್ತಿಯಲ್ಲಿ ನ್ಯಾಯಾಲಯವು ಅದರ ಮೂಲ ತೀರ್ಪು, ಡಿಕ್ರಿ ಅಥವಾ ಆದೇಶದ ಪದಗಳನ್ನು ಮಾರ್ಪಾಟುಗೊಳಿಸುವಂತಿಲ್ಲ, ವ್ಯತ್ಯಸ್ತಗೊಳಿಸುವಂತಿಲ್ಲ ಅಥವಾ ಅದಕ್ಕೆ ಏನನ್ನು ಸೇರ್ಪಡೆ ಮಾಡುವಂತಿಲ್ಲ**."
>
> (ಮುಖ್ಯವಾದದ್ದಕ್ಕೆ ಒತ್ತು ನೀಡಲಾಗಿದೆ)

13. ಪ್ರಸ್ತುತ ಮೊಕದ್ದಮೆಯಲ್ಲಿ, ಈಗಾಗಲೇ ಮೇಲೆ ಗಮನಿಸಿರುವಂತೆ, ಈ ನ್ಯಾಯಾಲಯವು ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದ–ಪ್ರತಿವಾದಗಳನ್ನು ಆಲಿಸಿದ ನಂತರ 28.11.2014ರಂದು ಮೇಲ್ಮನವಿಯನ್ನು (ಎಂಎಫ್ಎ 2206/2013) ವಿಲೆ ಮಾಡಿದ್ದು, ಅದರಲ್ಲಿ 6ನೇ ಪ್ರತಿವಾದಿಗೆ ಕೆಲವು ನಿರ್ದೇಶನಗಳನ್ನು ನೀಡಲಾಗಿತ್ತು. ಆ ನಿರ್ದೇಶನವನ್ನು/ಗಳನ್ನು ಪಾಲಿಸದಿದ್ದರಿಂದಾಗಿ ಗತ್ಯಂತರವಿಲ್ಲದೆ ವಿಲೆಯಾದ ಮೇಲ್ಮನವಿಯಲ್ಲಿ ಈ ಅರ್ಜಿಯ ಮುಖೇನ ವಾದಿಯು ಈ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಯಿತು.

3. (1999) 3 ಎಸ್‌ಸಿಸಿ 500

14. ಈ ಮೇಲೆ ಗಮನಿಸಿರುವಂತೆ ಒಂದು ತೀರ್ಪನ್ನು ಮಾರ್ಪಾಟುಗೊಳಿಸುವ ಅಥವಾ ವ್ಯತ್ಯಸ್ತಗೊಳಿಸುವ ಈ ನ್ಯಾಯಾಲಯದ ಅಧಿಕಾರವು ಸಿಪಿಸಿ ಕ್ರಮಾದೇಶ–XX ರ ನಿಯಮ (3)ರ ಪರಿಮಿತಿಗೊಳಪಟ್ಟಿದೆ. ಪ್ರಸ್ತುತ ಮೊಕದ್ದಮೆಯಲ್ಲಿ ಮೇಲ್ಮನವಿಯನ್ನು ಗುಣಾವಗುಣಗಳ ಮೇಲೆ ವಿಲೆ ಮಾಡಿದ ಕ್ಷಣವೇ ಈ ನ್ಯಾಯಾಲಯವು **"ಕಾರ್ಯಾಂತ ನಿವೃತ್ತ" ("functus officio")** ವಾಗಿದೆಯೆಂದು ಅನಿವಾರ್ಯವಾಗಿ ನಿರ್ಣಯಿಸಲೇಬೇಕಾಗಿದೆ. ಆದ್ದರಿಂದ ಮೇಲ್ಮನವಿಯನ್ನೇ ವಿಲೆ ಮಾಡಿ 28.11.2014ರಂದು ಹೊರಡಿಸಿದ ಆದೇಶದ ತರುವಾಯ ಯಾವುದೇ ಆದೇಶವನ್ನು ಹೊರಡಿಸುವ ತನ್ನ ಅಂತರ್ನಿಹಿತ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸುವುದಕ್ಕೆ ಮುಂದುವರಿಯುವುದಿಲ್ಲ. ವಾಸ್ತವವಾಗಿ, ಈ ನ್ಯಾಯಾಲಯವು ಹೊರಡಿಸಿದ ಆದೇಶದ ನಂತರ ವಾದಿಯು ನೀಡಿದ ಲೀಗಲ್ ನೋಟೀಸನ್ನು ಪರಿಶೀಲಿಸಿದರೆ, 28.11.2014ರಂದು ಈ ನ್ಯಾಯಾಲಯವು ನೀಡಿದ ನಿರ್ದೇಶನಗಳನ್ನು ಪಾಲಿಸದೆ ನ್ಯಾಯಾಂಗ ನಿಂದನೆ ಮಾಡಿರುವುದಕ್ಕೆ 6ನೇ ಪ್ರತಿವಾದಿಗೆ ಲೀಗಲ್ ನೋಟೀಸ್ ನೀಡಲಾಗಿದೆಯೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹಾಗಿದ್ದರೆ, ವಾದಿಯು ಆ ಸಂಬಂಧದಲ್ಲಿ ಆಕೆಗೆ ಸೂಚಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

15. ವಿಷಯವನ್ನು ಮತ್ತೊಮ್ಮೆ ಪುನರಾವರ್ತಿಸಿದರೆ, ವಾದಿಯು ಮುಖ್ಯ ಮೇಲ್ಮನವಿಯಲ್ಲಿ "ಸೋನಾ ಟವರ್ಸ್" ವಾಣಿಜ್ಯ ಕಟ್ಟಡದಿಂದ ಪ್ರಾಪ್ತವಾಗುವ ಎಲ್ಲಾ ಸ್ವೀಕೃತಿಗಳು/ಬಾಡಿಗೆಗಳನ್ನು ಮತ್ತು ಕೆಲವು ಪ್ರಾಸಂಗಿಕವಾದ ಮತ್ತು ಹೆಚ್ಚುವರಿ ಪರಿಹಾರಗಳನ್ನೂ ಕೂಡ ಠೇವಣಿ ಇಡುವಂತೆ 6ನೇ ಪ್ರತಿವಾದಿಗೆ ನಿರ್ದೇಶನ ನೀಡಲು ಕೋರಿದ ಐ.ಎ.ಸಂ.1 ಅನ್ನು ವಜಾಗೊಳಿಸಿದ ಆದೇಶವನ್ನು ವಾದಿಯು ಪ್ರಶ್ನಿಸಿದ್ದಳು. ಮುಖ್ಯ ಮೇಲ್ಮನವಿಯೊಂದಿಗೆ ಸಲ್ಲಿಸಿದ ಐ.ಎ.1/2013 ರಲ್ಲಿ ಕೋರಿದ ಕೋರಿಕೆಯು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಕೋರಿದ ಕೋರಿಕೆಯನ್ನು ಕೂಡ ಹೋಲುತ್ತದೆ ಮತ್ತು ಪ್ರಸ್ತುತ ಅರ್ಜಿಯಲ್ಲಿ ಎಂದರೆ, ಐ.ಎ.1/2015ರಲ್ಲಿ ಕೋರಿದ ಕೋರಿಕೆಯೂ ಕೂಡ ಬಾಡಿಗೆಯನ್ನು ಬ್ಯಾಂಕಿನ ಹೊರತಾಗಿ, ಈ ನ್ಯಾಯಾಲಯದ ರಿಜಿಸ್ಟ್ರಾರ್ ಕಚೇರಿಯಲ್ಲಿ ಠೇವಣಿ ಮಾಡಬೇಕೆಂದು

ಕೋರಿದ ಮಟ್ಟಿಗೆ ಹೊರತುಪಡಿಸಿ ಉಳಿದಂತೆ ಅದಕ್ಕೆ ಸಂವಾದಿಯಾಗಿದೆ. ಈ ನ್ಯಾಯಾಲಯವು ಮೇಲ್ಮನವಿಯನ್ನು ಮತ್ತು ಸದರಿ ಮೇಲ್ಮನವಿಯಲ್ಲಿ ಸಲ್ಲಿಸಿದ ಐ.ಎ. ಸಂ.1/2013 ಅನ್ನು ದಿನಾಂಕ 28.11.2014ರ ಆದೇಶದ ಮೂಲಕ ವಿಲೆ ಮಾಡಿದೆ. ಈ ನ್ಯಾಯಾಲಯವು ವಿಷಯದ ಮೊಕದ್ದಮೆಯನ್ನು ಅಂತಿಮವಾಗಿ ವಿಲೆ ಮಾಡಿರುವಾಗ, ಅಂತಿಮ ವಿಲೆಯಾದ ಹಿಂದಿನ ಆದೇಶವನ್ನು ರದ್ದುಗೊಳಿಸುವವರೆಗೆ ಮತ್ತು ರದ್ದುಗೊಳಿಸಿದ ಹೊರತು ಅಥವಾ ಆ ಮಟ್ಟಿಗೆ ಆ ಆದೇಶವನ್ನು ಮಾರ್ಪಾಡುಗೊಳಿಸುವವರೆಗೆ ಮತ್ತು ಮಾರ್ಪಾಟುಗೊಳಿಸಿದ ಹೊರತು ಈ ನ್ಯಾಯಾಲಯವು ಮತ್ತೊಮ್ಮೆ ನೇರವಾದ ಶಾಸನಾತ್ಮಕ ಉಪಬಂಧವಿಲ್ಲದಿರುವ ಸಂದರ್ಭದಲ್ಲಿ ಯಾವುದೇ ಹೊಸ ಪರಿಹಾರಕ್ಕಾಗಿ, ಹೆಚ್ಚುವರಿ ಪರಿಹಾರಕ್ಕಾಗಿ ಅಥವಾ ಅದೇ ಬಗೆಯ ಪರಿಹಾರಕ್ಕಾಗಿ ಸಲ್ಲಿಸುವ ಹೊಸ ಅರ್ಜಿಯನ್ನು ಪುರಸ್ಕರಿಸಲಾಗದು. ಅದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಂತಿಮ ತೀರ್ಪನ್ನು ಹೊರಡಿಸಿದ ಮೇಲೆ ನ್ಯಾಯಾಲಯವು ಕಾರ್ಯಾಂತ ನಿವೃತ್ತವಾಗುತ್ತದೆ. ಹಾಗಾಗಿ, ಹೊಸ ನಿರ್ದೇಶನಗಳಿಗಾಗಿ ಅಥವಾ ಹೆಚ್ಚಿನ ನಿರ್ದೇಶನಗಳಿಗಾಗಿ ಸಲ್ಲಿಸಲಾದ ವಾದಕಾಲೀನ ಅರ್ಜಿಯನ್ನು ಪುರಸ್ಕರಿಸಲಾಗದು.

16. ಆದ್ದರಿಂದ, ಮೇಲೆ ರೂಪಿಸಲಾದ ವಿವಾದಾಂಶ ಸಂ.1ಕ್ಕೆ ಉತ್ತರವಾಗಿ ಈ ನ್ಯಾಯಾಲಯವು ಕಾರ್ಯಾಂತ ನಿವೃತ್ತವಾಗಿದೆ, ಹಾಗಾಗಿ, ಈ ಐ.ಎ.1/2015 ಅರ್ಜಿಯನ್ನು ಪುರಸ್ಕರಿಸಲು ಸಕ್ಷಮವಾಗಿಲ್ಲದಿರುವುದರಿಂದ ಅದು ಸಮರ್ಥನೀಯವಲ್ಲವೆಂದು ನಿರ್ಣಯಿಸುವ ಮೂಲಕ 6ನೇ ಪ್ರತಿವಾದಿಯ ಪರವಾಗಿ ಉತ್ತರಿಸಬೇಕಾಗುತ್ತದೆಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ.

**ವಿವಾದಾಂಶ ಸಂಖ್ಯೆ.2:**

17. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ವಿಸ್ತೃತವಾಗಿ ಗುಣಾವಗುಣಗಳ ಮೇಲೆ ವಾದಗಳನ್ನು ಮಂಡಿಸಿದ್ದರೂ, ಈ ನ್ಯಾಯಾಲಯವು ಅದರ ಚರ್ಚೆಗೆ ಹೋಗುವುದಿಲ್ಲ. ಬದಲಾಗಿ, 28.11.2014ರಂದು ಈ ನ್ಯಾಯಾಲಯವು

ಹೊರಡಿಸಿದ ಆದೇಶದ ಮರು ಪರಿಶೀಲನೆಯನ್ನು ಕೋರುವುದಕ್ಕಾಗಲಿ ಅಥವಾ ದಿನಾಂಕ 28.11.2014ರ ಆದೇಶದ ಮುಂದುವರಿಕೆಯಾಗಿ, ಅಗತ್ಯ ಅರ್ಜಿಯನ್ನು ಸಲ್ಲಿಸುವ ಮೂಲಕ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಸೂಕ್ತ ಪರಿಹಾರವನ್ನು ಕೋರುವುದಕ್ಕಾಗಲಿ ವಾದಿಗಳಿಗೆ ಸ್ವಾತಂತ್ರ್ಯವನ್ನು ನೀಡಿದರಷ್ಟೇ ಸಾಕಾಗುತ್ತದೆ. ಅಲ್ಲದೆ, ಹಾಗೆ ಅರ್ಜಿಯನ್ನು ಸಲ್ಲಿಸಿದರೆ ಅಧಿವಿಚಾರಣಾ ನ್ಯಾಯಾಲಯವು ಅದನ್ನು ಪರಿಶೀಲಿಸುತ್ತದೆ ಮತ್ತು 6ನೇ ಪ್ರತಿವಾದಿಯು 28.11.2014ರಂದು ಈ ನ್ಯಾಯಾಲಯವು ನೀಡಿದ ನಿರ್ದೇಶನಗಳನ್ನು ಪಾಲಿಸಿದ್ದಾನೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಅದು ಖಾತ್ರಿಪಡಿಸಿಕೊಳ್ಳುತ್ತದೆ ಮತ್ತು ಸದರಿ ಅರ್ಜಿಯನ್ನು ಗುಣಾವಗುಣಗಳ ಮೇಲೆ ಹಾಗೂ ಕಾನೂನಿಗನುಸಾರವಾಗಿ ಪರಿಶೀಲಿಸುವ ಸ್ವಾತಂತ್ರ್ಯ ಅದಕ್ಕಿರುತ್ತದೆ ಎಂಬುದನ್ನು ಹೇಳುವ ಅಗತ್ಯವಿಲ್ಲ. ಅದರಂತೆ ಈ ಸಂಬಂಧ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸದೆ ವಾದಿಗೆ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸುವ ಸ್ವಾತಂತ್ರ್ಯವನ್ನು ಕಾದಿರಿಸಲಾಗಿದೆ ಮತ್ತು ಹಾಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಅದನ್ನು ಮೇಲೆ ನಿರ್ಣಯಿಸಲಾಗಿರುವಂತೆ ಶೀಘ್ರವಾಗಿ ವಿಲೆ ಮಾಡತಕ್ಕದ್ದು.

ಮೇಲೆ ತಿಳಿಸಲಾದ ಕಾರಣಗಳಿಗಾಗಿ ಐ.ಎ.ಸಂ.1/15 ಅರ್ಜಿಯನ್ನು ವಿಲೆ ಮಾಡಲಾಗಿದೆ.